# ಅನುಬಂಧ ಭಾಗ

# ಸಭಾಸೇವಕಿಯರು

## ಜೇಮ್ಸ್ ಬೇಲ್ಸ್‌ರವರಿಂದ[1]

"ಸ್ತ್ರೀ ಸೇವಕಿಯರು" ಹೊಸ ಒಡಂಬಡಿಕೆಯಲ್ಲಿ ಇದ್ದರು ಎಂಬ ಯಾವುದೇ ಕಲಹಗಳು ಇಲ್ಲದೆ ಇದ್ದರೂ, ಸಭೆಯು ಯಥಾರ್ಥವಾಗಿ ಸ್ತ್ರೀ ಸೇವಕಿಯರನ್ನು ಹೊಂದಿತ್ತು ವಿಶೇಷ ಕಾರ್ಯಗಳನ್ನು ನೆರವೇರಿಸಲು ಸಭೆಯ ಸ್ತ್ರೀಯರನ್ನು ನೇಮಿಸಿದ್ದರು, ಆದುದರಿಂದ, ಸಭೆಯಲ್ಲಿ, "ಸಭಾಸೇವಕಿಯರ" ಕಾರ್ಯಲಯವು ಸಭೆಯಲ್ಲಿತ್ತು ಎಂದು ನಾವು ಸಿದ್ಧಾಂತ ಪಡಿಸಬೇಕಿರುವದಿಲ್ಲ. ತಾಂತ್ರೀಕವಾಗಿ ಈ ರೀತಿಯಾದ ಕಾರ್ಯಲವು ಇತ್ತು ಅಥವಾ ಇರಲಿಲ್ಲ ಎಂಬ ಪ್ರಶ್ನೆಯು ಉದ್ಭವಿಸುವದಿಲ್ಲ, ಮತ್ತು ಅನಾವಶ್ಯಕವಾಗಿರುತ್ತದೆ. ಒಂದು ವೇಳೆ ಈ ಕಾರ್ಯಲಯವನ್ನು ಸ್ತ್ರೀಗೆ ಅಧಿಕಾರದ ಮಾನ್ಯತೆ, ದೊರೆಯದಿದ್ದಲ್ಲಿ, ಆಕೆಯು ಸಭೆಯಲ್ಲಿ ಯಾವುದೇ ಕಾರ್ಯಗ ಳನ್ನು ಮಾಡಲು ನಿರಾಕರಿಸಿದರೆ, ಇಂಥಾ ಸ್ವಭಾವವನ್ನು ಹೊಂದಿರುವ ಕ್ರೈಸ್ತ ಸ್ತ್ರೀಯು ಸಭೆಯಲ್ಲಿ ಯಾವುದೇ ಕಾರ್ಯವನ್ನು ಮಾಡಲು ಅನರ್ಹಳಾಗಿರುತ್ತಾಳೆ.

### ಸಭೆಯಲ್ಲಿರುವ ಕೆಲಸಗಾರರು

ಪೌಲನ ಕೆಲಸದಲ್ಲಿ ಸ್ತ್ರೀಯರು ಸಹಕರಿಸಿದರು. ಫಿಲಿಪ್ಪಿ ಸಭೆಯವರು ಪೌಲನೊಂದಿಗೆ ಕೆಲಸ ಮಾಡಲು ಒಬ್ಬ ಸಹೋದರನನ್ನು ಕಳುಹಿಸಿದರು (ಫಿಲಿಪ್ಪಿ 2:25-28). ಸುವಾರ್ತೆಯಲ್ಲಿ ಎಪಫ್ರೊದೀತನು "ಕ್ರಿಸ್ತನ ಸೇವೆಯಲ್ಲಿ" ಪೌಲನಿಗೆ ಸಹಾಯಕನಾಗಿದ್ದನು (ಫಿಲಿಪ್ಪಿ 2:29, 30). ತನಗೆ ಸಹಾಯ ಮಾಡಿದ ಇಬ್ಬರು ಸ್ತ್ರೀಯರಿಗೆ ಸಹಾಯಿಸ ಬೇಕೆಂದು ಪೌಲನು ಫಿಲಿಪ್ಪಿ ಸಭೆಯವರಿಗೆ ಬೇಡಿಕೊಂಡನು:

> ಕರ್ತನಲ್ಲಿ ಒಂದೇ ಮನಸ್ಸುಳ್ಳವರಾಗಿರ್ರಿಯೆಂದು ಯುವೊದ್ಯಳನ್ನೂ ಸಂತುಕೆಯನ್ನೂ ಪ್ರಬೋಧಿಸುತ್ತೇನೆ. ಸತ್ಯ ಸಯುಜನೇ, ಅವರಿಗೆ ಸಹಾಯಕನಾಗಿರ ಬೇಕೆಂದು ನಿನ್ನನ್ನೂ ಕೇಳಿಕೊಳ್ಳುತ್ತೇನೆ. ಅವರು ಕ್ಲೇಮೆನ್ಸ್ ಮುಂತಾದ ನನ್ನ ಜೊತೆ ಕೆಲಸದವರ ಸಹಿತವಾಗಿ ನನ್ನ ಕೂಡ ಸುವಾರ್ತೆಗೋಸ್ಕರ ಪ್ರಯಾಸಪಟ್ಟವರು. ಅವರವರ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆದವೆ (ಫಿಲಿಪ್ಪಿ 4:2, 3).

ದೇವರ ಕೆಲಸದಲ್ಲಿ ಈ ಸ್ತ್ರೀಯರು ಸಹಾಯ ಮಾಡಿದ್ದರು. ಅವರಿಗೆ ಸಭೆಯು ಸಹಾಯ ಮಾಡುವಂಥದ್ದು ಒಳ್ಳೆಯದೇ ಆಗಿತ್ತು.

ದೇವರ ಕೆಲವು ಕೆಲಸಗಳನ್ನು ಮಾಡಲು, ಸಭೆಯು ಸ್ತ್ರೀಯರನ್ನು ಆರಿಸಿ, ಅವರಿಗೆ ಸಹಾಯವನ್ನು ಮಾಡಿದ್ದರು.

> ನಾನು ನಿಮ್ಮ ಬಳಿಗೆ ಕಳುಹಿಸುವ ನಮ್ಮ ಸಹೋದರಿಯಾದ ಫೊಯಿಬೆಯನ್ನು ಪ್ರೀತಿಯಿಂದ ಅಂಗೀಕರಿಸಿರಿ. ಆಕೆಯು ಕೆಂಕ್ರೆಯ ಪಟ್ಟಣದಲ್ಲಿರುವ ಸಭೆಯ ಸೇವಕಳಾಗಿದ್ದಾಳೆ; ನೀವು ಆಕೆಯನ್ನು ಕರ್ತನ ಶಿಷ್ಯಳೆಂದು ದೇವಜನರಿಗೆ ತಕ್ಕ ಹಾಗೆ ಸೇರಿಸಿಕೊಂಡು ಸಹಾಯವು ಯಾವ ವಿಷಯದಲ್ಲಿ ಬೇಕಾಗಿದ್ದರೂ ಸಹಾಯವನ್ನು ಮಾಡಿರಿ. ಆಕೆಯು ನನಗೂ ಅನೇಕರಿಗೂ ಸಹಾಯ ಮಾಡಿದವಳು (ರೋಮಾಪುರ 16:1, 2).

ಅವಳು ಮಾಡುತ್ತಿದ ಕಾರ್ಯವು, ಅವಳು ಕೆಲಸ ಮಾಡುತ್ತಿದ್ದ ಸಭೆಯ ಸರಹದ್ದಿಗೆ ಮೀಸಲಾಗಿರಲಿಲ್ಲ. ಅಲ್ಲಿ ಅವಳು ಸೇವಕಿಯಾಗಿದ್ದಳಷ್ಟೆ ರೋಮಾಪುರ 16:1, 2, "ಆಕೆಯು

ಕೆಂಕ್ರೆಯ ಪಟ್ಟಣದಲ್ಲಿರುವ ಸಭೆಯ ಸೇವಕಳು.'' ಆಗಿರುವದರಿಂದ ಅವರು ಆಕೆಯನ್ನು ಸ್ವೀಕರಿಸಿ ಸಹಾಯಿಸಬೇಕೆಂದು ಪೌಲನು ಮನವಿಮಾಡಿದನು. ಆಕೆಯು ಸಹ ಪೌಲನಿಗೂ ಮತ್ತು ಇತರರಿಗೂ ಸಹಾಯಿಸಿದ್ದಳು. ಆಕೆಯು ಅವರೊಂದಿಗೆ, ಶಿಫಾರಿಸಿನ ಪತ್ರದಂತೆಯೂ, ಮತ್ತು ಸೇವೆಗೆ ಒಪ್ಪಿಸಲ್ಪಟ್ಟವಳಾಗಿಯೂ ಪ್ರಯಾಣ ಮಾಡುತ್ತಿದ್ದಳು; ಆದುದರಿಂದ ಪೌಲನು ಫೊಯಿಬೆಯನ್ನು ರೋಮಾಪುರ ಸಭೆಗೆ ಪರಿಚಯಿಸಿ, ಸಭೆಯವರು ಅವಳಿಗೆ ಸಹಾಯಿಸ ಬೇಕೆಂದು, ಅವಳ ಪರವಾಗಿ ಬೇಡಿಕೊಂಡನು.

ನೈಜೀರಿಯಾದಲ್ಲಿ, ಸಭೆಯಿಂದ ಕಳುಹಿಸಲ್ಪಟ್ಟ ಅನೇಕ ದಾದಿಯರು ಸೇವೆ ಮಾಡುತ್ತಿದ್ದಾರೆ. ಅವರು ಸುವಾರ್ತೆಯನ್ನು ಬಹಿರಂಗವಾಗಿ ಬೋಧಿಸುವ ವ್ಯಕ್ತಿಗಳಲ್ಲ, ಆದರೆ ಅವರು ಸಭೆಯ, ಪರಿಣಾಮಕಾರಿಯಾದ ಸೇವಕಿಯರಾಗಿದ್ದಾರೆ. ಸಭೆಯು ಬಯಸಿ - ಕೊರತೆಗಳಿರುವಾದಾದರೆ, ಮತ್ತು ಸಭೆಯ ಸಾಮರ್ಥ್ಯದ ಮೇರೆಗೆ, ಸಮೂದಾಯದ ರೋಗಿ ಗಳ ಪೋಷಣೆಗಾಗಿ, ಪೂರ್ಣಾವದಿ ಸೇವೆ ಮಾಡಲು ದಾದಿಯರನ್ನು ನೇಮಿಸಬಹುದು; ದೇವರ ಸೇವೆಗೆ ಸಮರ್ಪಿಸಿಕೊಂಡವರಿಗೆ ಸಹಾಯಿಸುವುದು ಸಭೆಗೆ ಯೋಗ್ಯವಾಗಿದೆ, ಹೇಗೂ ಕೆಲವು ಸಭೆಗಳಲ್ಲಿ ಸಭೆಯ ಕಟ್ಟಡವನ್ನು ಕಾಯಲು ದ್ವಾರಪಾಲಕರನ್ನು ನೇಮಿಸಿಕೊಂಡು, ಅವರಿಗೂ ಸಭೆಯವರು ಸಹಾಯಿಸುತ್ತಾರೆ (ಅದು ಸಹ ಯೋಗ್ಯವಾದ ಕೆಲಸವೇ). ಅದೇ ರೀತಿಯಾಗಿ, ದೇವ ಸೇವಕರ ದೈಹೀಕ ಕೊರತೆಗಳನ್ನು ಮತ್ತು ಪಾಪಿಗಳ ಕೊರತೆಗಳನ್ನು ಪರಿಹರಿಸಲು ದಾದಿಯರಿಗೆ ಸಭೆಯು ಸಹಾಯಿಸುತ್ತದೆ.

ಇದರ ಅರ್ಥ, ಸಭೆಯ ಸಕಲ ಸೇವಕರಿಗೂ, ಸಭೆಯು ಹಣದ ಸಹಾಯ ಮಾಡ ಬೇಕು ಎಂಬುದಾಗಿ ಸಲಹೆ ನೀಡುತ್ತಿರುವದಿಲ್ಲ ಬಡ ಆತ್ಮಿಕ ಸಭೆಗಳ ಸೇವೆಯನ್ನು ಹಣ ತೆಗೆದುಕೊಳ್ಳದೆ ಮಾಡಬೇಕು!

ವಿವಿಧ ರೀತಿಯಾಗಿ ಸ್ತ್ರೀಯರು ಸೇವೆ ಮಾಡಬೇಕು ಎಂಬುದಾಗಿ ಸಭಾ ಹಿರಿಯರು ಸಲಹೆ ನೀಡಬಹುದು, ಕರ್ತನ ಮೇಜಿಗೆ ದೊರಕುವ ವಸ್ತುಗಳ ವಿಷಯದಲ್ಲಿ ಅವರು ಕಾಳಜಿ ವಹಿಸಬಹುದು; ದೀಕ್ಷಾಸ್ನಾನದ ಸಮಯದಲ್ಲಿ, ಸ್ತ್ರೀಯರಿಗೆ ಸಹಾಯಿಸಬಹುದು, ಜನರನ್ನು ಸಂದರ್ಶಿಸಬಹುದು ಮತ್ತು ಇತರೆ ಕಾರ್ಯಗಳನ್ನು ಮಾಡಬಹುದು.

1 ತಿಮೊಥೆ 3:11ರ ಕಾರ್ಯಗಳನ್ನು ಸಾಮಾನ್ಯವಾಗಿ ಸ್ತ್ರೀಯರು ಅಳವಡಿಸಿಕೊಳ್ಳ ಬಹುದು. ಅವನು ತೀತ 2:3ರಲ್ಲಿ ತಿಳಿಸಿದಂತೆ, "ವೃದ್ಧ ಸ್ತ್ರೀಯರು ಯೋಗ್ಯರಾಗಿರಬೇಕು" 1 ತಿಮೊಥೆ 3:11 ಹೇಳುತ್ತದೆ. ಸ್ತ್ರೀಯರು "ಗೌರವವುಳ್ಳವರಾಗಿರಬೇಕು" ಮತ್ತು ಪ್ರಾಯದ ಸ್ತ್ರೀಯರು ಜಿತೇಂದ್ರಿಯರಾಗಿರಬೇಕೆಂದು ಬೋಧಿಸಬೇಕು (ತೀತ 2:3-5; ASV). ಅವರು ಸುಶೀಲೆಯರಾಗದೆ ಇದ್ದರೆ, ಅವರಿಗೆ ಕಷ್ಟವು ಪ್ರಾಪ್ತವಾಗುತ್ತದೆ. ಸ್ತ್ರೀಯರು ವೃದ್ಧರಿರಲಿ, ಅಥವಾ ಪ್ರಾಯದವರಾಗಿರಲಿ, ಅವರು ಚಾಡಿಹೇಳದವರೂ, ಸ್ಥಿರಚಿತ್ತ ಹೊಂದಿದವರೂ ಆಗಿರಬೇಕು ಎಂದು ಪೌಲನು ತಿಳಿಸಿದ್ದಾನೆ (1 ತಿಮೊಥೆ 3:11). ವೃದ್ಧ ಸ್ತ್ರೀಯರಿಗೆ, ನಿರ್ದಿಷ್ಟ ವಾಗಿ ಹೇಳಿರುವದೇನೆಂದರೆ, ಅವರು "ಮಧ್ಯಾಸಕ್ತಿವುಳ್ಳವರಾಗಿರಬಾರದು" (ತೀತ 2:3).

ವೃದ್ಧ ಸ್ತ್ರೀಯರು ತರಬೇತಿ ಕೊಡಬೇಕಾಗಿ, "ಇದಲ್ಲದೆ ಅವರು ಪ್ರಾಯದ ಸ್ತ್ರೀಯರಿಗೆ - ನಿಮ್ಮ ಮೂಲಕ ದೇವರ ವಾಕ್ಯಕ್ಕೆ ದೂಷಣೆಯಾಗದಂತೆ ನೀವು ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿಸುವವರೂ ದಮೆಯುಳ್ಳವರೂ ಮಕ್ಕಳನ್ನೂ ಪ್ರೀತಿಸುವವರೂ ದಮೆಯುಳ್ಳವರೂ ಪತಿವ್ರತೆಯರೂ ಮನೆಯಲ್ಲೇ ಕೆಲಸಮಾಡುವವರೂ ಸುಶೀಲೆಯರೂ ನಿಮ್ಮ ಗಂಡಂದಿರಿಗೆ ಅಧೀನರೂ ಆಗಿರಬೇಕೆಂದು ಬುದ್ಧಿಕಲಿಸುವ ಹಾಗೆ ಬೋಧಿಸು" (ತೀತ 2:4, 5). "ಅವರು ಎಲ್ಲಾ ವಿಷಯಗಳಲ್ಲಿ ನಂಬಿಗಸ್ತರಾಗಿಯೂ ಇರಬೇಕು" 1 ತಿಮೊಥೆ 3:11; ಈ ವಿಷಯಗಳು ಕ್ರೈಸ್ತತ್ವದಲ್ಲಿ ಬೆಳೆಯುತ್ತಿರುವ ಎಲ್ಲಾ ಸ್ತ್ರೀಯರಿಗೆ ಅನ್ವಯಿಸುತ್ತದೆ.

ಸಭೆಗೆ, ಈ ವಿಧದ ಅನೇಕ ಸೇವಕಿಯರ ಅವಶ್ಯವಿರುತ್ತದೆ. ಈ ಕೆಲಸಗಳಿಗಾಗಿ, ಹಿರಿಯರಿಂದ ಅಪ್ಪಣೆ ಪಡೆಯುವ ಅವಶ್ಯವಿರುವದಿಲ್ಲ ದೇವರ ಈ ಕಾರ್ಯಗಳನ್ನು

ಸ್ತ್ರೀಯರಿಗೆ ವಹಿಸಿದ್ದಾನೆ, ಪೌಲನ ಮೂಲಕ ದೇವರು, ತೀತನಿಗೆ ತಿಳಿಸುವದೇನೆಂದರೆ, "ನೀನಾದರೋ ಸ್ವಸ್ತಬೋಧನೆಗೆ ಅನುಗುಣವಾಗಿ ಉಪದೇಶಮಾಡು" (ತೀತ 2:1). ಇದರಲ್ಲಿ ಹಿರಿಯ ಸ್ತ್ರೀಯರಿಗೂ, ಕೆಲವು ನಿಯಮಗಳು ಒಳಗೊಂಡಿರುತ್ತವೆ (ತೀತ 2:3). ಕೆಲವರು ಹಿರಿಯರಿಂದ ಅಪ್ಪಣೆ ಹೊಂದಿ ಕಾರ್ಯವನ್ನು ನಿರ್ವಹಿಸಬಹುದು; ಸಭೆಯಲ್ಲಿ ದೊರಕುವ ಪ್ರಯೋಜನವುಳ್ಳ ಅವಕಾಶಗಳನ್ನು ಈಡೇರಿಸಲು, ಯಾವುದೇ ಅಪ್ಪಣೆಗಾಗಿ ಸ್ತ್ರೀಯರು ಕಾಯುವ ಅವಶ್ಯವಿರುವದಿಲ್ಲ.

## ಸಭೆಯಲ್ಲಿ ವಿಧವೆಯರು

ಸಭೆಯಲ್ಲಿ, ಸಹಾಯಕ್ಕೆ ಒಳಗಾದ ವಿದವೆಯರ ಪಟ್ಟಿಯನ್ನು ಕಾಣುತ್ತೇವೆ. ಅವರು ಒಂದು ವಿಶೇಷ ಗುಂಪಿಗೆ ಸೇರಿದವರಾಗಿರುತ್ತಾರೆ (1 ತಿಮೊಥೆ 5:9). ಮೊದಲನೆಯದಾಗಿ ಅವರಿಗೆ ಸಹಾಯ ನೀಡಲು, ಯಾವ ಸಂಬಂಧಿಕರೂ ಇಲ್ಲದೆ ಇದ್ದರೆ, ಅವರನ್ನು ಈ ಪಟ್ಟಿಯಲ್ಲಿ ಸೇರಿಸಬೇಕು. ನಂತರ ಸಭೆಯು ಅವರಿಗೆ ಸಹಾಯಿಸಬೇಕು (1 ತಿಮೊಥೆ 5:3, 4, 16). ಮತ್ತು ಅವರು ದಿಕ್ಕಿಲ್ಲದೆ ಒಬ್ಬಂಟಿಗರಾಗಿದ್ದರೆ ಸಹಾಯಿಸಬೇಕು (1 ತಿಮೊಥೆ 5:5; ASV) ಎರಡನೆಯದಾಗಿ, ಅವರಿಗೆ ಅರವತ್ತು ವರುಷಗಳಾಗಿರಬೇಕು, ಮೂರನೆಯದಾಗಿ ಅವರು ಮನೆಯ ಕೆಲಸದಲ್ಲಿ ಅನುಭವಿಗಳಾಗಿರ ಬೇಕು ಅಂದರೆ ಮಕ್ಕಳನ್ನು ನೋಡಿಕೊಳ್ಳುವದರಲ್ಲಿ. ನಾಲ್ಕನೆಯದಾಗಿ ಅವರು ಒಳ್ಳೆ ಕ್ರಿಯೆಗಳನ್ನು ಮಾಡಿದ್ದರಲ್ಲಿ ಪ್ರಸಿದ್ಧಿ ಹೊಂದಿರಬೇಕು. ಅತಿಥಿಸತ್ಕಾರವನ್ನೂ, ದೇವ ಜನರಿಗೆ ಉಪಚಾರ ಮಾಡಿದವಳೂ, ಸಂಕಟದಲ್ಲಿ ಬಿದ್ದವರನ್ನು ಸಂತೈಸಿದವಳೂ, ಸತ್ಕಾರ್ಯಗಳಲ್ಲಿ ಆಸಕ್ತಿವುಳ್ಳವಳೂ (1 ತಿಮೊಥೆ 5:10) ಆಗಿರಬೇಕು. ಸಭೆಯು ದಿಕ್ಕಿಲ್ಲದ ವಿಧವೆಯರನ್ನು ಸಂರಕ್ಷಿಸಬೇಕು (1 ತಿಮೊಥೆ 5:16).

ಈ ಸ್ತ್ರೀಯರು ಸಭೆಗೆ ಯಾವ ವಿಧವಾದ ಸೇವೆಯನ್ನು ಸಲ್ಲಿಸಿದ್ದರು? ಪ್ರಾರ್ಥಿಸುವ ಸ್ತ್ರೀಯರಾಗಿ - ಎಲ್ಲಾ ಕ್ರೈಸ್ತರೂ ಪ್ರಾರ್ಥಿಸಲೇಬೇಕು. ಸಾಮಾನ್ಯವಾಗಿ, ಅವರು ಸಭೆಗಾಗಿ ಪ್ರಾರ್ಥಿಸುತ್ತಿದ್ದರು, ವಿಶೇಷವಾದ ವಯಕ್ತಿಕ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದರು. ಅವರು ತಮ್ಮ ನಿರೀಕ್ಷೆಯನ್ನು ದೇವರಲ್ಲಿಯೂ ಹೊಂದಿದವರಾಗಿ, ಪ್ರಾರ್ಥಿಸುತ್ತಿದ್ದರು. ಅವರು ಪ್ರಾರ್ಥನೆಯಲ್ಲಿ ಆಸಕ್ತಿಯನ್ನು ಕಳಕೊಳ್ಳದೆ, ಪ್ರಾರ್ಥನಾ ನಿರತರಾಗಿದ್ದರು. "ಅವಳು ಹಗಲಿರುಳು ವಿಜ್ಞಾಪನೆಗಳಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತಳಾಗಿರುವಳು" (1 ತಿಮೊಥೆ 5:5). ಹೇಗೂ ಪ್ರಾರ್ಥನೆಯನ್ನು ಹೊರತುಪಡಿಸಿ, ಬೇರೆ ಕೆಲಸಗಳನ್ನು ನಿರ್ವಹಿಸದೆ ಇರಲಿಲ್ಲ. ಪ್ರಾರ್ಥನೆಯು, ಪ್ರತಿ ಕ್ರೈಸ್ತರಿಗೆ ಬಹು ಪ್ರಾಮುಖ್ಯವಾಗಿದೆ, ಕೇವಲ ಪ್ರಾರ್ಥನೆಯಿಂದಲೇ ಬದುಕಲಾಗದು. ಇದರ ಜೊತೆಯಲ್ಲಿ, ವಿವಿಧವಾದ ಜವಾಬ್ದಾರಿಗಳೂ ಸಹ ಇರುತ್ತವೆ, ಅದು ಅವರ ಯೋಗ್ಯತೆ, ತರಬೇತಿ, ಮತ್ತು ಬಲದ ಮೇಲೆ ಅವಲಂಬಿಸಿರುತ್ತದೆ. ಅವರು ಒಳ್ಳೆಯ ಮನೆ ಕೆಲಸದವರಾಗಿರುವದರಿಂದ, ಅವರು ಪ್ರಾಯದ ಸ್ತ್ರೀಯರಿಗೆ ಸಹಾಯಿಸಬಹುದು. ಅವರಿಗೆ ಅತಿಥಿ ಸತ್ಕಾರವು ತಿಳಿದಿರುವದರಿಂದ, ಅವರು ಕೊರತೆಯುಳ್ಳವರಿಗೆ ಸಹಾಯಿಸಬಹುದು, ಈ ವಿಧದಲ್ಲಿ ಸಭೆಗೆ ಸೇವೆ ಮಾಡಬಹುದು.

ಯೊಪ್ಪದ ಸಭೆಯಲ್ಲಿಯೂ ವಿಧವೆಯರಿದ್ದರು:

> ಯೊಪ್ಪದಲ್ಲಿ ತಬಿಥಾ ಎಂಬ ಒಬ್ಬ ಶಿಷ್ಯಳಿದ್ದಳು. ಆ ಹೆಸರಿಗೆ ಗ್ರೀಕ್ ಭಾಷೆಯಲ್ಲಿ ದೊರ್ಕ ಎಂದರ್ಥ. ಆಕೆಯು ಸತ್ಕ್ರಿಯೆಗಳನ್ನೂ ದಾನಧರ್ಮಗ ಳನ್ನೂ ಬಹಳವಾಗಿ ಮಾಡುತ್ತಿದ್ದಳು. ಆ ಕಾಲದಲ್ಲಿ ಆಕೆ ರೋಗದಲ್ಲಿ ಬಿದ್ದು ಸತ್ತಳು, ಮತ್ತು ಆಕೆಯ ಶವವನ್ನು ತೊಳೆದು ಮೇಲಂತಸ್ತಿನಲ್ಲಿಟ್ಟರು. ಯೊಪ್ಪಕ್ಕೆ ಲುದ್ದವು ಹತ್ತಿರವಾಗಿರಲಾಗಿ ಪೇತ್ರನು ಅಲ್ಲಿ ಇದ್ದಾನೆಂದು ಶಿಷ್ಯರು ಕೇಳಿ ಇಬ್ಬರು ಮನುಷ್ಯರನ್ನು ಅವನ ಬಳಿಗೆ ಕಳುಹಿಸಿ - ತಡಮಾಡದೆ ನಮ್ಮ ತನಕ ಬರಬೇಕೆಂದು ಬೇಡಿಕೊಂಡರು. ಪೇತ್ರನು ಎದ್ದು ಅವರ ಜೊತೆಯಲ್ಲಿ ಹೋದನು. ಅವನು ಬಂದ ಕೂಡಲೆ ಅವರು ಅವನನ್ನು ಮೇಲಂತಸ್ತಿಗೆ

> ಕರೆದುಕೊಂಡು ಹೋದರು. ಅಲ್ಲಿ ವಿಧವೆಯರೆಲ್ಲರು ಅಳುತ್ತಾ ಅವನ ಹತ್ತಿರ ನಿಂತುಕೊಂಡು ದೊರ್ಕಳು ತಮ್ಮ ಸಂಗಡ ಇದ್ದಾಗ ಮಾಡಿ ಕೊಟ್ಟಿದ್ದ ಒಳಂಗಿಗಳನ್ನೂ ಮೇಲಂಗಿಗಳನ್ನೂ ತೋರಿಸಿದರು. ಪೇತ್ರನು ಅವರೆಲ್ಲರನ್ನು ಹೊರಕ್ಕೆ ಕಳುಹಿಸಿ ಮೊಣಕಾಲೂರಿ ಪ್ರಾರ್ಥನೆಮಾಡಿ ಶವದ ಕಡೆಗೆ ತಿರುಗಿಕೊಂಡು ತಬಿಥಾ, ಏಳು ಅಂದನು. ಆಕೆಯು ಕಣ್ಣು ತೆರೆದು ಪೇತ್ರನನ್ನು ನೋಡಿ ಎದ್ದು ಕೂತುಕೊಂಡಳು. ಅವನು ಆಕೆಯನ್ನು ಕೈಕೊಟ್ಟು ಎಬ್ಬಿಸಿ ದೇವಜನರನ್ನೂ ವಿಧವೆಯರನ್ನೂ ಕರೆದು ಜೀವಿತಳಾದ ಆಕೆಯನ್ನು ಅವರೆದುರಿಗೆ ನಿಲ್ಲಿಸಿದನು (ಅಪೊಸ್ತಲರ ಕೃತ್ಯಗಳು 9:36-41).

ದೊರ್ಕಳು ಸಭೆಯಿಂದ ಸಹಾಯವನ್ನು ಹೊಂದಿ, ವಿಧವೆಯರ ಪಟ್ಟಿಯಲ್ಲಿ ಸೇರಿ ಕೊಂಡಿದ್ದಳು ಎಂದು ವಾಕ್ಯವು ತಿಳಿಸುವದಿಲ್ಲ, ದಿಕ್ಕಿಲ್ಲದ ಒಬ್ಬಂಟಿಗರಾದ "ವಿಧವೆ ಯರನ್ನು" ಮಾತ್ರ ಸಭೆಯ ಸಹಾಯದ ಪಟ್ಟಿಗೆ ಸೇರಿಸಲಾಗಿತ್ತು (1 ತಿಮೊಥೆ 5:3-5; ASV); ಅವರಿಗೆ ಸಹಾಯ ಮಾಡುವವರು ಯಾರೂ ಇರಲಿಲ್ಲ. ಅವರಿಗೆ ಸಹಾಯ ಮಾಡುವ ಸಂಬಂಧಿಕರು ಇರುತ್ತಿದ್ದರೆ, ಅವರು ಸಭೆಗೆ ಭಾರವಾಗುವದಿಲ್ಲ. ತನಗೆ ತಾನೇ ಸಹಾಹಿಸಿಕೊಳ್ಳುವಂಥ, ವಿಧವೆಗೆ ಸಹ, ಈ ನಿಯಮವು ಒಳ ಪಡುತ್ತದೆ, ಅವಳಿಗೆ ಸಹಾಯ ನೀಡುವದಾದರೆ, ಅದು ಸಭೆಗೆ ಭಾರವಾಗುತ್ತದೆ ನಿಜವಾದ ಕೊರತೆಯುಳ್ಳ ವಿಧವೆಯರಿಗೆ ಮಾತ್ರ ಸಭೆಯು ಸಹಾಯಿಸಬೇಕು (1 ತಿಮೊಥೆ 5:16). ದೊರ್ಕಳಿಗೆ, ಸಾಕಾಗುವಷ್ಟು ಸಹಾಯವು ಅವಳಲ್ಲಿಯೇ ಇತ್ತು. ಆದುದರಿಂದ ಆಕೆಯು ಅನೇಕರಿಗೆ ಒಳ್ಳೆಯ ಕಾರ್ಯಗಳನ್ನು ಮಾಡುತ್ತಿದ್ದಳು. ಆಕೆಯನ್ನು ಈ ರೀತಿಯಾಗಿ ವರ್ಣಿಸಲಾಗಿದೆ. "ದೊರ್ಕಳು ಸತ್ಕ್ರಿಯೆಗಳನ್ನೂ ದಾನಧರ್ಮಗಳನ್ನೂ ಬಹಳ ವಾಗಿ ಮಾಡುತ್ತಿದ್ದಳು" (ಅಪೊಸ್ತಲರಕೃತ್ಯಗಳು 9:36). ಆಕೆ "ವಿಧವೆಯಾಗಿದ್ದರೂ" ಸಹ, ಒಳ್ಳೆಯ ಕಾರ್ಯಗಳ ಮೂಲಕ ಸಭೆಗೆ ಸೇವೆ ಮಾಡಿದಳು. ಆಕೆಯು ವಿಧವೆಯರೊಂದಿಗೆ ತೋರ್ಪಡಿಸಿಕೊಂಡಳು, ಅವರಿಗೆ ಅವಳಲ್ಲಿ ಹೆಚ್ಚಾದ ಗೌರವವಿತ್ತು. ದೊರ್ಕಳು ಸತ್ತಳು ಎಂದು ಓದುತ್ತೇವೆ, "ಅಲ್ಲಿ [ಪೇತ್ರನು] ವಿಧವೆ ಯರೆಲ್ಲರೂ ಇದ್ದರು. ಅವರೆಲ್ಲರೂ ಅಳುತ್ತಿದ್ದರು, ದೊರ್ಕಳು ತಮ್ಮ ಸಂಗಡವಿದ್ದಾಗ ಮಾಡಿಕೊಟ್ಟಿದ್ದ ಒಳಂಗಿಗಳನ್ನು ಮೇಲಂಗಿಗಳನ್ನು ತೋರಿಸಿದರು" (ಅಪೊಸ್ತಲರಕೃತ್ಯಗಳು 9:39). ಅವರೊಂದಿಗೆ ಅಂದರೆ ಅವರೊಂದಿಗಿದ್ದರು ಎಂದು ತಿಳಿಯುವ ಅವಶ್ಯವಿಲ್ಲ. "ಅವಳು ಜೀವದಿಂದಿರುವಾಗ" ಎಂಬ ಅರ್ಥವಿರುತ್ತದೆ. ಅವಳು ಕುಟುಂಬದೊಂದಿಗೆ ಇದ್ದಳು ಎಂಬುದಾಗಿ ಇಲ್ಲ, ಯಾಕೆಂದರೆ ಅವಳು ಮರಣದಿಂದ ಎದ್ದಾಗ ಅವಳನ್ನು ಅವಳ ಕುಟುಂಬಕ್ಕೆ ಒಪ್ಪಿಸಿದರು ಎಂದು ಬರೆದಿರುವದಿಲ್ಲ, ಆದರೆ ಅವಳನ್ನು "ದೇವಜನರ ಮತ್ತು ವಿಧವೆಯರ" ಎದುರಿಗೆ ನಿಲ್ಲಿಸಿದನು ಎಂದು ಬರೆದದೆ (ಅಪೊಸ್ತಲರಕೃತ್ಯಗಳು 9:41). ಒಂದು ವೇಳೆ ಅವಳು ಮದುವೆಯಾಗಿರಲಿಕ್ಕಿಲ್ಲ, ಅದರೆ ಅವಳು ಕ್ರಿಸ್ತನಿಗೆ ಸೇವೆ ಮಾಡುತ್ತಾ, ಸಭೆಯಲ್ಲಿದ್ದ ವಿಧವೆ ಯರೊಂದಿಗೆ ಇದ್ದಳು ಎಂದು ತಿಳಿದು ಬರುತ್ತದೆ.

1 ತಿಮೊಥೆ 3:11ರಲ್ಲಿರುವ "ವಿಧವೆಯರು" 1 ತಿಮೊಥೆ 5:3ರಲ್ಲಿ ಕಾಣಿಸಿರುವ "ವಿಧವೆ ಯರೇ" ಎಂದು ಕೆಲವರು ಯೋಚಿಸುತ್ತಾರೆ. ಹೌದು ಈ ವಿಧವೆಯರು 1 ತಿಮೊಥೆ 3:11ರಲ್ಲಿ ಕಾಣಿಸಿರುವ ಎಲ್ಲಾ ಗುಣಗಳನ್ನು ಹೊಂದಿದ್ದರು. ಅದು ಸತ್ಯವೇ 1 ತಿಮೊಥೆ 3:11ರಲ್ಲಿರುವ ವಿಧವೆ ಯರ ಗುಣಗಳಲ್ಲಿ ಮಿತಿ ಇದ್ದರೂ, ಅವರು "ವಿಧವೆಯರೇ ಆಗಿದ್ದರು" ಆದುದರಿಂದ ಅವರನ್ನು ವಿಧವೆಯರೆಂದು ಪೌಲನು ಸಂಬೋಧಿಸಬಹುದಿತ್ತು, ಆದರೆ ಅವನು ಆರೀತಿ ಮಾಡಲಿಲ್ಲ. 1 ತಿಮೊಥೆ 3:11ರ ವಿಷಯವನ್ನು ಕುರಿತು ಪೌಲನು, ಯಾವುದೇ ವಿಧವಾದ ಚರ್ಚೆಯನ್ನು ಮಾಡಲಿಲ್ಲ.

ವೃದ್ಧ ಸ್ತ್ರೀಯರ ಕಾರ್ಯಗಳನ್ನೇ, ವಿಧವೆಯರು ಮಾಡಬಹುದಿತ್ತು ತೀತ 2:3, ಆದರೆ ವೃದ್ಧ ಸ್ತ್ರೀಯರು, ವಿಧವೆಯರಿಗೆ ನೇಮಕವಾದ ಗುಣಗಳನ್ನು ಹೊಂದಿರಬೇಕು ಎಂಬ

ನಿಯಮಗಳಿಲ್ಲ.

## ಮುಕ್ತಾಯ

ಸ್ತ್ರೀಯರು, ತಾವು ಹೊಂದಿರುವ ಪ್ರತಿಭೆಯನ್ನು ಕ್ರಿಸ್ತನ ಸೇವೆಯಲ್ಲಿ ಉಪಯೋಗಿಸಬಹುದು. ದೊರ್ಕಳ ಹಾಗೆ, ತಮ್ಮ ಸೂಜಿ ದಾರದಿಂದಲೂ ಸೇವೆಮಾಡ ಬಹುದು. ನಾವು ವಿವರಿಸಿರುವ ಸಕಲ ವಿಧವಾದ ಸಾಮರ್ಥ್ಯದಿಂದ, ಸ್ತ್ರೀಯರು ಹೊಸ ಒಡಂಬಡಿಕೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಹೊಂದಿರುವ ಯೋಗ್ಯತೆ, ತರಬೇತಿ, ಅವಕಾಶಗಳು, ಮತ್ತು ಸ್ತ್ರೀಯರ ಕುರಿತಾದ ಬೈಬಲ್‌ನ ನಿಯಮಗಳ ಮುಖಾಂತರ ಸಮಾನಾಂತರವಾಗಿ, ಯಾವ ಸೇವೆಯನ್ನು ಬೇಕಾದರೂ ಮಾಡಬಹುದು. ಪ್ರತಿಯೊಂದು ಸಭೆಯು, ಅವರನ್ನು ನೇಮಕ ಮಾಡಿರಲಿ, ಅಥವಾ ಮಾಡದೆ ಇರಲಿ, ಅಂಥಹ ಸ್ತ್ರೀಯರು ಸಭೆಯಲ್ಲಿ ಇರುತ್ತಾರೆ. ಸಭೆಯು, ಸ್ತ್ರೀಯಲ್ಲಿರುವ ಯಾವ ಕಾರ್ಯದ ಮೇಲೆ ಅವಲಂಭಿಸಬಹುದು, ಎಂದು ತಿಳಿದು ಅವರನ್ನು ಕರೆಯಬಹುದು ಮತ್ತು ಸ್ತ್ರೀಯರು ತಿಳಿದು, ಕಾರ್ಯಗಳಿಗೆ ಸ್ಪಂದಿಸ ಬಹುದು.

---

ಟಿಪ್ಪಣಿ

[1]This lesson is an excerpt from James Bales, *The Deacon and His Work* (Shreveport, La.: Lambert Book House, 1967), 79-83. Adapted and used by permission.

# 1 ಕೊರಿಂಥದವರಿಗೆ 11

## ನೀಲ್ ಲೈಟ್‌ಫುಟ್‌ರವರಿಂದ[1]

ಗ್ರೀಕ್ ಸಮುದಾಯದಲ್ಲಿ ಸ್ತ್ರೀಯರ ಸ್ಥಾನಮಾನ ಕಾಲಕಾಲಕ್ಕೆ ಬದಲಾಗುತ್ತಿತ್ತು. ಮತ್ತು ಸ್ಥಳಕ್ಕೆ ಅನುಗುಣವಾಗಿಯೂ ಬದಲಾಗುತ್ತಿತ್ತು, ಇದಕ್ಕೆ ಪುರುಷರೇ ಕಾರಣರಾಗಿದ್ದರು. ಸಾಮಾನ್ಯಾವಾಗಿ ಸ್ತ್ರೀಯರು ಅವಿದ್ಯಾವಂತರಾಗಿದ್ದರು, ಆದರೆ ಮನೆಯ ಕೆಲಸಗಳಲ್ಲಿ, ನಿರತರಾಗಿರುತ್ತಿದ್ದರು; ಅವಳು ಹೆಂಡತಿಯಾಗಿರಬಹುದು, ಉಪಪತ್ನಿಯಾಗಿರಬಹುದು, ಅಥವಾ ದಾಸಿಯಾಗಿರಬಹುದು, ಅವಳು ರಾಜಕೀಯದಲ್ಲಿ ಪಾಲು ತೆಗೆದುಕೊಳ್ಳದೆ, ಅವರು ಪುರುಷರ ಸ್ವಾಸ್ತ್ಯವಾಗಿರುತ್ತಿದ್ದರು. ರೋಮನ್ನರ ಸ್ವಾತಂತ್ರದ ದಿವಸಗಳಲ್ಲಿ, ಸ್ತ್ರೀಯರು ಸಂತೋಷ ದಿಂದಿದ್ದರು; ಮತ್ತು ಕ್ರೈಸ್ತರ ದಿವಸಗಳವರಗೆ, ಸ್ತ್ರೀಯರು ಪುರುಷರಿಗೆ ಸಮಾನರಾಗಿದ್ದರು.

ಈ ಅಸಮಾನತೆಯ ಹಿನ್ನೆಲೆಯಲ್ಲಿ - ಪೌಲನು ಯೇಸುವಿನ ಮಾದರಿಯನ್ನು ಹಿಂಬಾಲಿಸಿದನು - ಸ್ತ್ರೀ ಪುರುಷರಿಬ್ಬರಿಗೂ ಸುವಾರ್ತೆಯನ್ನು ಸಾರಿದನು. ಅವನು ಫಿಲಿಪ್ಪದ ಲುದ್ಯಳಿಗೂ, ಇತರ ಸ್ತ್ರೀಯರಿಗೂ ಸಾರಿದನು (ಅಪೊಸ್ತಲರಕೃತ್ಯಗಳು 16:13), ಅವನು ಮೆಕೆದೋನ್ಯದಲ್ಲಿಯೂ, ಥೆಸಲೋನಿಕದಲ್ಲಿಯೂ ಪ್ರಾಮುಖ್ಯರಾದ ಸ್ತ್ರೀಯರಿಗೆ ಸಾರಿದನು (ಅಪೊಸ್ತಲರಕೃತ್ಯಗಳು 17:4), ಮತ್ತು ಬೆರಿಯದಲ್ಲಿರುವವರಿಗೂ ಸಾರಿದನು (ಅಪೊಸ್ತಲರಕೃತ್ಯಗಳು 17:12). ತನ್ನ ಪತ್ರದಲ್ಲಿ ಸ್ತ್ರೀಪುರುಷರಿಬ್ಬರನ್ನು ಅಭಿನಂದಿಸಿದನು (ರೋಮಾಪುರ 16; ಫಿಲೊಮೋನ 2). ಪ್ರಿಸ್ಕಿಲ್ಲಾ ಮತ್ತು ಅಕ್ವಿಲನಿಗೆ ಎರಡು ಸಾರಿ ವಂದಿಸಿ, ಪ್ರಿಸ್ಕಿಲಳ ಹೆಸರನ್ನು ಮೊದಲಿಗೆ ಹೆಸರಿಸಿ ವಂದಿಸಿದನು (ರೋಮಾಪುರ 16:3, 4; 2 ತಿಮೊಥೆ 4:19). ರೋಮಾಪುರ 16ರಲ್ಲಿ ಹದಿನೆಂಟು ಪುರುಷರಿಗೂ ಮತ್ತು ಹನ್ನೊಂದು ಸ್ತ್ರೀಯರಿಗೂ ಹೆಸರೆಸರಾಗಿ ವಂದಿಸಿದನು. ಇತರರಾದ ಫಿಲಿಪ್ಪಿಯ ಲೋವಿಯ ಮತ್ತು ಯೂನಿಕೆಯ ಕುರಿತಾಗಿಯೂ ತಿಳಿಸಿದ್ದಾನೆ (2 ತಿಮೊಥೆ 1:5); ಯೆವೊದ್ಯಳು, ಸಂತುಕೆಯರು ಸುವಾರ್ತೆಯಲ್ಲಿ ಪ್ರಯಾಸಪಟ್ಟಿದ್ದರು, “ನನ್ನ ಕೂಡ ಸುವಾರ್ತೆಗೋಸ್ಕರ ಪ್ರಯಾಸಪಟ್ಟವರು” (ಫಿಲಿಪ್ಪಿ 4:2, 3); ಕೊರಿಂಥದ ಕ್ಲೋಯೆ ಬಗ್ಗೆ (1 ಕೊರಿಂಥ 1:11). ಕ್ಲೋಯೆಯ ಮನೆಯವರಿಂದ ಅಥವಾ ಸ್ವತಂತ್ರರೂ ದಾಸರ ಮೂಲಕ ಕೊರಿಂಥ ಸಭೆಯಲ್ಲಿದ್ದಂತ ಸಮಸ್ಯೆಗಳ ಬಗ್ಗೆ ಪೌಲನು ತಿಳುಕೊಂಡಿದ್ದನು. ಆದುದರಿಂದ ಕೊರಿಂಥ ಸಭೆಯ ಸ್ತ್ರೀಯರು ಮುಸುಕನ್ನು ಧರಿಸಿಕೊಳ್ಳಬೇಕೆಂಬುದು, ಅವರನ್ನು ಸರ್ವಕಾಲಕ್ಕು ಹೀನೈಸಿದ ವಿಷಯವಲ್ಲವೆಂದು ನೆನಪು ಮಾಡಿಕೊಳ್ಳಬೇಕು.

### ಸಮಸ್ಯೆಗಳಿಗೆ ಕಾರಣಗಳು

1 ಕೊರಿಂಥ 11ನೇ ಅಧ್ಯಾಯದ ಕಾರ್ಯಗಳು, ಅನೇಕ ಸಮಸ್ಯೆಗಳಿಂದ ಕೂಡಿರುತ್ತದೆ. ಆ ದಿನಗಳ ಮತ್ತು ಪುರಾತನ ಪ್ರಪಂಚದ ಸಂಸ್ಕೃತಿಯನ್ನು ನಾವು ತಿಳಿಯುವ ರೀತಿಯಲ್ಲಿ ತಿಳಿಯಲು ಅಸಾಧ್ಯವಾಗುತ್ತದೆ. ಪುರಾತನ ಕಾಲದಲ್ಲಿ ಸ್ತ್ರೀಯರು ಸಾಮಾನ್ಯವಾಗಿ, ಸೆರಗನ್ನು ಧರಿಸುತ್ತಿದ್ದರು. ಬೈಬಲ್‌ನ ಸಾವಿಸ್ತಾರವಾದ ಬರವಣಿಗಳು ಪುನಃ ಪುನಃ ಈ ವಾಕ್ಯನವನ್ನು ತಿಳಿಸಿದರೂ, ಗ್ರೀಕರು ತೊಡುತ್ತಿದ ತಲೆಯ ಮುಸುಕಿನ ಬಗ್ಗೆ ವಿಶೇಷವಾದ ಜನರಲ್ಲಿ ಯಥಾರ್ಥವಾದ ವಾಗ್ವಾದವಾಗಿತ್ತು. ಗ್ರೀಕ್ ಸ್ತ್ರೀಯರು ಬಹಿರಂಗವಾಗಿ ಮುಸುಕನ್ನು ಧರಿಸಲೇ ಬೇಕೆಂಬ ನಿಯಮವು ಇರಲಿಲ್ಲ ಎಂಬ ನಿಯಮದ ಸೂಚನೆಯನ್ನು ನಾವು ನೋಡುತ್ತೇವೆ. ಅವರ ಹಬ್ಬದ ದಿವಸದ ಬಗ್ಗೆ ಮೆರವಣಿಗೆಯ ಬಗ್ಗೆ ಮಾತ್ರ, ವಿವರವಾಗಿ ವಿವರಿಸಲಾಗಿದೆ

ಆದರೆ ಮುಸುಕಿನ ಬಗ್ಗೆ ತಿಳಿಸಿರುವದಿಲ್ಲ. ದೇವತೆಗಳನ್ನು ಮತ್ತು ರಾಜ ಕುಮಾರಿಯರನ್ನು ಮುಸುಕನ್ನು ಧರಿಸದವರಾಗಿ, ಚಿತ್ರೀಕರಿಸಲಾಗಿದೆ.

ಇನ್ನೊಂದು ಕಡೆ, ಫ್ಲೂಟಾರ್ಚ್ ಎಂಬವನು, ಕ್ರಿಸ್ತ ಪೂರ್ವ, ಮೊದಲ ಶತಮಾನದಲ್ಲಿ, ವ್ಯತ್ಯಾಸವುಳ್ಳ ಚಿತ್ರವೊಂದನ್ನು ಪ್ರದರ್ಶಿಸಿದ್ದನು. ಅದರಲ್ಲಿ ಸ್ಪರ್ತಾನ ಹುಡುಗಿಯರು, ಮುಸುಕನ್ನು ಧರಿಸಿದವರಾಗಿ, ಸಾರ್ವಜನಿಕ ಸ್ಥಳಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು, ಮದುವೆ ಯಾದವರು ಮುಸುಕನ್ನು ಧರಿಸುತ್ತಿದ್ದರು.[2] ಮತ್ತು ಸ್ತ್ರೀಯರು ಮುಸುಕು ಧರಿಸಿದವರಾಗಿ ಸಾರ್ವಜನಿಕ ಸ್ಥಳಗಳಿಗೆ ಹೋಗುತ್ತಿದ್ದರು. ಆದರೆ ಪುರುಷರು ಮುಸುಕು ಇಲ್ಲದೆ ಹೋಗು ತ್ತಿದ್ದರು.[3] ಹೇಗೂ ಈ ಸಂಬಂಧವಾಗಿ ಹಿಂದಿನ ದಿವಸಗಳಲ್ಲಿ, ಸ್ತ್ರೀಯರು ಯಾವುದೇ ಕಾರಣಕ್ಕೂ ತಲೆಯನ್ನು ಮುಚ್ಚಿ ಕೊಳ್ಳಬಾರದಿತ್ತು.[4] ಅದೇ ವಾಕ್ಯದಲ್ಲಿ ಫ್ಲೂಟಾರ್ಚನು ಮುಂದುವರಿದು, ಪುರುಷರು ಕೂದಲನ್ನು ಕತ್ತರಿಸುವುದು ಸಂಪ್ರದಾಯವಾಗಿತ್ತು, ಸ್ತ್ರೀಯರು ಕೂದಲನ್ನು ಉದ್ದವಾಗಿ ಬೆಳೆಸುವದು ಸಹ ಸಂಪ್ರದಾಯವಾಗಿತ್ತು ಎಂದು ತಿಳಿಸಿದ್ದಾನೆ.

ಫ್ಲೂಟಾರ್ಚನ ಹೇಳಿಕೆಯಂತೆ, ಪೂರ್ವ ದೇಶಗಳಲ್ಲಿ ಸ್ತ್ರೀಯರು ಮುಸುಕನ್ನು ಧರಿಸುವುದು, ಸರ್ವಸಾಧಾರಣವಾದ ಅಭ್ಯಾಸವಾಗಿತ್ತು. ಮತ್ತು ಈ ಕಾರ್ಯಕ್ಕೆ ಪ್ರೋತ್ಸಾಹ ನೀಡಲಾಯಿತು. ತಾರ್ಸದಲ್ಲಿ ಸ್ತ್ರೀಯು ಹೊರಗೆ ಹೋಗುವಾಗ ಭಾರವಾದ ಮುಸುಕನ್ನು ಧರಿಸಿದ್ದಳು.[5] ಯೆರುಸಲೇಮಿನಲ್ಲಿ ಸ್ತ್ರೀಯರು ಮನೆಯಿಂದ ಹೊರಡುವಾಗ, ಅವರು ಎರಡು ಮುಸುಕುಗಳಿಂದ ತಲೆಯನ್ನು ಮುಚ್ಚಿಕೊಳ್ಳುತ್ತಿದ್ದರು; ಒಂದು ವೇಳೆ ಅವಳು ಮುಸುಕಿಲ್ಲದೆ ಹೊರ ಹೋದರೆ, ಅವಳ ಈ ಹೀನ ನಡತೆಗೆ, ಗಂಡನು ಅವಳನ್ನು ತ್ಯಜಿಸಬಹದಾಗಿತ್ತು.[6] ಮತ್ತು ಪೂರ್ವದೇಶದಲ್ಲಿದ್ದ, ಅಸ್ಸೀಯನನ್ನರಲ್ಲಿ, ನಿಯಮವು ಇನ್ನೂ ಕಠಿಣವಾಗಿತ್ತು; ಸ್ತ್ರೀಯರು ಮುಸುಕುಧರಿಸುತ್ತಿದ್ದರು; ಮರಣದ ಬಯದಿಂದ ವೇಶ್ಯೆಯರು ಮುಸುಕು ಧರಿಸುವ ಹಾಗಿರಲಿಲ್ಲ.[7]

ಕೊರಿಂಥ ಸಭೆಯಲ್ಲಿದ್ದ ಎರಡನೆಯ ನಿರ್ದಿಷ್ಟವಾದ ಸಮಸ್ಯೆಯ ಬಗ್ಗೆ ಸ್ಪಷ್ಟ ವಾಗಿ ತಿಳಿದಿರುವದಿಲ್ಲ. ಅಲ್ಲಿನ ಕ್ರೈಸ್ತರು ಕೆಲವು ಪ್ರಶ್ನೆಗಳನ್ನು ಬರೆದು ಪೌಲನಿಗೆ ಕೇಳಿ ದ್ದರು (1 ಕೊರಿಂಥ 7:1). ಈ ಪ್ರಶ್ನೆಗೆ ಅಧ್ಯಾಯ 7ರಲ್ಲಿ ಉತ್ತರವನ್ನು ಕಾಣುತ್ತೇವೆ; ಅವನ ಉತ್ತರಕ್ಕೆ ಸೂಚನೆಯಾಗಿ, "ಈ ಕುರಿತಾಗಿ" ಎಂದು (7:1; 8:1; 12:1)ರಲ್ಲಿ ನೋಡುತ್ತೇವೆ. ಈ ಸೂಚನೆಗಳನ್ನು ಹಿಂಬಾಲಿಸಿದರೆ, ಈ ಪ್ರಶ್ನೆಗೆ ಕೆಲ ಉತ್ತರವನ್ನು ಪಡೆಯುತ್ತೇವೆ, ಮತ್ತು ಅಲ್ಲಿರುವಂಥದ್ದೆಲ್ಲವೂ ಪೌಲನ ಉತ್ತರವಾಗಿರುತ್ತದೆ, ಅದನ್ನು ನಾವು ಪರ್ಯಾಯ ಉತ್ತರ ವಾಗಿ ಪಡೆಯಬಹುದು. ಇದನ್ನು ನಾವು ಟೆಲಿಫೋನ್ ಸಂಭಾಷಣೆಗೆ ಹೋಲಿಸ ಬಹುದು, ಒಂದು ಕಡೆಯಿಂದ ಮಾತ್ರ ಸಂಭಾಷಣೆಯನ್ನು ಕೇಳುವಂತೆ ಅನೇಕ ವಿಷಯಗಳ ಕುರಿತು ಕೊರಿಂಥದವರು ಪೌನಿಗೆ ಬರೆದಿದ್ದರು. ಅವರು ಬರೆದ ಪತ್ರಗಳು ನಮ್ಮಲ್ಲಿರುವದಿಲ್ಲ; ಆದುದರಿಂದ ನಾವು ಟೆಲಿಫೋನಿನ ದೃಷ್ಟಾಂತವನ್ನು ಉಪಯೋಗಿಸುತ್ತೇವೆ. ಅವರ ಕಡೆಯಿಂದ ಬಂದಂತಹ ಸಂಭಾಷಣೆಯನ್ನು ನಾವು ಕೇಳಲಾಗುತ್ತಿಲ್ಲ. ನಾವು ಪೌಲನ ಸ್ವರವನ್ನು ಮಾತ್ರ ಕೇಳುತ್ತೇವೆ, ಅದು ನಮಗೆ ತಿಳಿಯದ ಪ್ರಶ್ನೆಗಳ, ಉತ್ತರವಾಗಿರುತ್ತದೆ. ಆದದರಿಂದ, ಮುಸುಕಿನ ವಿಷಯದ ಯಾಕೆ ಕಷ್ಟವಾಗಿದೆ ಇದು ನಮಗೆ ಸಹಾಯ ಮಾಡುತ್ತದೆ.

## ಪೌಲನು ಹೇಳಿದ್ದಾದರೂ ಏನು

1 ಕೊರಿಂಥ 11:2 ಆರಾಧನೆಯ ಕ್ರಮದ ಹೊಸ ಭಾಗವನ್ನು ಪ್ರಾರಂಭಿಸುತ್ತದೆ. ಅಧ್ಯಾಯದ ಕೊನೆಯ ಭಾಗವು, ಬಹಿರಂಗವಾದ ಆರಾಧನೆಯ ಕುರಿತು ಸಂದೇಹ ರಹಿತವಾಗಿ ತಿಳಿಸುತ್ತದೆ, ವಚನ 2ರಲ್ಲಿ "ನಿಮ್ಮನ್ನು ಹೊಗಳುತ್ತೇನೆ" ಎಂದು "ನಿಮ್ಮನ್ನು ನಾನು ಹೊಗಳುವದಿಲ್ಲವೆಂದು" ವಚನ 17ರಲ್ಲಿ ಹೇಳುತ್ತಾನೆ. ವಚನ 4ರಲ್ಲಿ ಮತ್ತು 5ರಲ್ಲಿ

ಪ್ರಾರ್ಥನೆಯ ಮತ್ತು ಪ್ರವಾದನೆಯ ಕುರಿತಾಗಿ ಮಾತನಾಡಿ, ಸಭೆಯಲ್ಲಿ ಸಾಮಾನ್ಯ ವಾಗಿ ನಡೆಯುವ ಕ್ರಿಯೆಗಳ ಬಗ್ಗೆ ತಿಳಿಸಲಾಗಿದೆ. ಒಂದು ಕಡೆಯಿಂದ ಕೇಳಲ್ಪಡುವ ಸಂಭಾಷಣೆಯಿಂದ, ಕೆಳಮಟ್ಟಿಗೆ, ಇನ್ನೊಂದು ಕಡೆಯಿಂದ ಬರಬಹುದಾದ ವಿಷಯಗಳನ್ನು ಗ್ರಹಿಸಬಹುದು ಬಹುಶಃ ಇದರ ಮೂಲಕ, ಕೊರಿಂಥದಲ್ಲಿ ಉದ್ಭವಿಸಿದ್ದ ಸಮಸ್ಯೆಗಳನ್ನು ಕೆಳಮಟ್ಟಿಗೆ ಗ್ರಹಿಸಬಹುದು. ಕೊರಿಂಥದ ಸ್ತ್ರೀ ಪುಷರಿಗೆ, ವಿಶೇಷವಾದ ಆತ್ಮನ ವರಗಳು ಕೊಡಲ್ಪಟ್ಟಿದ್ದವು (1 ಕೊರಿಂಥ 12:4-31). ಇದರಲ್ಲಿ ಪ್ರವಾದನೆಯ ವರವು ಸೇರಿತ್ತು, ಇದರ ಮೂಲಕ ಪ್ರೇರಣೆಯಿಂದ ಬೋಧಿಸುವಂತ ವರವೂ ನೀಡಲಾಗಿತ್ತು. ಸ್ತ್ರೀಯರೂ ಸಹ ಪ್ರವಾದಿ ಸಬಹುದಾಗಿತ್ತು. ಅಂದರೆ ಅವರು ಪುರುಷರ ಸಮ್ಮುಖದಲ್ಲಿ ಪ್ರವಾದಿಸಬಹುದಾಗಿತ್ತೇ? ಅವರು ದೈವೀಕ ಸಂದೇಶಗಳನ್ನು ಮುಸಕು ಧರಿಸಿದವರಾಗಿ ನೀಡುತ್ತಿದ್ದರೆ, ಅಥವಾ ಅವರು ಕ್ರಿಸ್ತನಲ್ಲಿ ತಮ್ಮ ಸ್ವಾತಂತ್ರವನ್ನು ಉಪಯೋಗಿಸಿದರೆ, ತಮ್ಮ ಮುಸುಕನ್ನು ತೆಗೆದು, ಒಂದೇ ದೇವರ ಕುಟುಂಬವೆಂದು ತಿಳಿದು, ಸ್ವತಂತ್ರವಾಗಿ ಪ್ರವಾದಿಸಿದರೆ? ಈ ರೀತಿಯಾದ ಪ್ರಶ್ನೆಗಳನ್ನು ಕೊರಿಂಥದವರು ಪೌಲನಿಗೆ ಕೇಳಿರಬಹುದು, ಅಥವಾ ಕ್ಲೋಯೆಯ ಕುಟುಂಬದವರ ಮೂಲಕ ಈ ಪ್ರಶ್ನೆಗಳು ಪೌಲನಿಗೆ ತಿಳಿಯಬಹುದು. ಇದು ಬಹಳ ಪ್ರಮುಖ್ಯವಾದ ವಿಷಯ ವಾಗಿ ಪೌಲನಿಗೂ ಹಾಗೂ ಕೊರಿಂಥದವರಿಗೂ ಪರಿಣಮಿಸಿತ್ತು. ಯಾಕೆಂದರೆ ಪುರಾ ತನ ಕಾಲದಲ್ಲಿ ಬಟ್ಟೆ ಧರಿಸುವುದು, ರಾಷ್ಟ್ರೀಯ ಸಂಪ್ರದಾಯ ಅಥವಾ ನೈತಿಕ ಹವ್ಯಾಸ ವಾಗಿತ್ತು. ಸಂಪ್ರದಾಯವು ಏನೇ ಇರಲಿ, ಅವರು ತಮ್ಮ ನೈತಿಕ ಮಟ್ಟದಿಂದ ಸರಿಯಲಿಲ್ಲ.

ಸ್ತ್ರೀಯರು ಸಾರ್ವಜನಿಕವಾಗಿ ಮುಸುಕನ್ನು ಧರಿಸಿಕೊಳ್ಳಬೇಕು ಎಂದು ಪೌಲನು ಕೊರಿಂಥದವರಿಗೆ ಸರಳವಾಗಿ ಹೇಳಿದನು. ಅದರ ಅರ್ಥ ಪ್ಲೂಟಾರ್ಚನು ಮೊದಲ ಶತಮಾನದ ಅಂತ್ಯದಲ್ಲಿ ತಿಳಿಸಿದಂತೆ, ಕೊರಿಂಥದಲ್ಲಿ ಈ ಸಂಪ್ರದಾಯವು ರೂಢಿಯಲ್ಲಿತ್ತು. ಆ ಸಮಾಜದಲ್ಲಿ ಸ್ತ್ರೀಯರು ತಲೆ ಕೂದಲನ್ನು ಕತ್ತರಿಸಬಾರದು ಎಂಬ ವಾಡಿಕೆ ಇದ್ದದ್ದರಿಂದ, ಪೌಲನು ಈ ವಿಷಯದಲ್ಲಿ ಗಂಭೀರವಾದ ವಾಗ್ವಾದವನ್ನು ಮಾಡಿದನು. ಅವನ ವಾಗ್ವಾದ ವನ್ನು ನಾಲ್ಕು ವಿಧವಾಗಿ, ಈ ಮುಂದಿನಂತೆ ವಿಭಾಗ ಮಾಡಬಹುದು.

1. *ದೈವಶಾಸ್ತ್ರದಿಂದ ತರ್ಕ.* ಈ ವಿಷಯಕ್ಕೆ, ದೇವರೇ ಮುಖ್ಯ ಕೇಂದ್ರವಾ ಗಿರುವದರಿಂದ ಇದು "ದೈವಶಾಸ್ತ್ರದ" ವಾಗ್ವಾದವಾಗಿರುತ್ತದೆ. ಇಲ್ಲಿ ಪೌಲನು ನೀಡಿರುವ ವ್ಯಾಖ್ಯಾನವು ಕ್ರಿಸ್ತನಿಂದ ಪ್ರಾರಂಭವಾಗಿ, ಸ್ತ್ರೀ ಪುರುಷರ ಬಳಿಗೆ ಹೋಗುತ್ತದೆ, ನಂತರ ಅದು ದೇವರ ಬಳಿಗೆ ಏರಿ ಹೋಗುತ್ತದೆ. ಪೌಲನು ಇಲ್ಲಿ "ತಲೆ" ಎಂಬುದಾಗಿ ಉಪಯೋಗಿಸಿದ್ದಾನೆ: "... ಪ್ರತಿ ಪುರುಷನಿಗೂ ಕ್ರಿಸ್ತನು ತಲೆ ಆಗಿದ್ದಾನೆ. ಸ್ತ್ರೀಗೆ ಪುರುಷನು ತಲೆ ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ" (ವಚನ 3). "ತಲೆ" ಎಂದರೆ "ಮೂಲ" ಅಥವಾ "ಶ್ರೇಷ್ಠ" ನಂತರದ ಹೇಳಿಕೆ ಇಲ್ಲಿ ಉತ್ತಮವಾಗಿರುತ್ತದೆ. ಯಾಕೆಂದರೆ ಎಲ್ಲಿಯೂ, ದೇವರೇ ಕ್ರಿಸ್ತನ ಮೂಲ, ಎಂಬುದಾಗಿ ಹೇಳಿರುವದಿಲ್ಲ, ಆದರೆ ಕ್ರಿಸ್ತನು ಹೇಗೂ ದೇವರ ಜೊತೆ ಕೆಲಸದವನೂ, ಆದುದರಿಂದ ಅವನಿಗಿದ್ದಂತ, ಈ ಸ್ಥಾನದ ಮೂಲಕ, ಆತನು ಮನುಷ್ಯನಾದನು. ಅದೇ ರೀತಿಯಲ್ಲಿ ಅಥವಾ ಬಹುಶಃ "ಹೆಂಡತಿ"ಯು (ಒಂದು ವೇಳೆ ಪೌಲನ ಪರಸ್ಪರ ಗಂಡ ಹೆಂಡತಿಯರ ಸಂಬಂಧದ ಕುರಿತು ಮಾತನಾಡುತ್ತಿದ್ದರೆ), ಪುರುಷನ ಕೈ ಕೆಳಗಿರುವ ಜೊತೆ ಕಲಸದವಳಾಗಿ, ಪುರುಷನಿಗಾಗಿ ಕಾರ್ಯ ನಿರ್ವಹಿಸ ಬೇಕು. ಕ್ರಿಸ್ತನು ಪುರುಷನಿಗೆ ಯಜಮಾನನು ಎಂದು ಪೌಲನು ತಿಳಿಸುತ್ತಿದ್ದಾನೆ, ಪುರುಷನು ಸ್ತ್ರೀಗೆ ಯಜಮಾನನಾಗಿದ್ದಾನೆ, ದೇವರು ಎಲ್ಲರಿಗೂ ಯಜಮಾನನಾಗಿದ್ದಾನೆ. ತಲೆಗೆ ಮುಸುಕು ಹಾಕಿಕೊಳ್ಳುವದು ಅಧೀನತೆಗೆ ಸಚನೆಯಾಗಿರುವದರಿಂದ, ಪುರುಷನು ಮುಸುಕುಧರಿಸುವುದು ಅವಮಾನಕರವಾಗಿದೆ, ಮತ್ತು ಸ್ತ್ರೀ ಮುಸುಕು ಧರಿಸದೆ ಇರುವದು ಸಹ ಅವಮಾನಕರವಾಗಿದೆ ಎಂದು ಪೌಲನು ತರ್ಕ ಮಾಡಿದ್ದಾನೆ. ಮುಸುಕು ಧರಿಸದ ಮಹಿಳೆಯು, ಅವಳ ತಲೆ ಕೂದಲನ್ನು ಕತ್ತರಿಸಿಕೊಳ್ಳುವಂತೆ ಅಥವಾ ಬೋಳಿಸಿಕೊಳ್ಳುವಂತೆಯೇ - ಈ ಕಾರ್ಯವು ಕೊರಿಂಥದಲ್ಲಿ ಅನೈತಿಕ

ವಾಗಿತ್ತು. ವಚನ 7ರಿಂದ 9ರವರೆಗೆ ಪೌಲನು ತನ್ನ "ದೈವಶಾಸ್ತ್ರದ" ವಾಗ್ವಾದವನ್ನು ಮುಂದುವರಿಸಿದ್ದಾನೆ. ಸ್ತ್ರೀಯು, ಅಧೀನಳಾಗುವಂತ ಕ್ರಿಯೆಯು ಸೃಷ್ಟಿಯ ನಿಯಮವಾಗಿರುತ್ತದೆ. ಪುರುಷನು ದೇವರ ಸಾರೂಪ್ಯವನ್ನು ಪಡೆದು ದೇವರ ಮಹಿಮೆಯನ್ನೇ ಬಿಂಬಿಸುತ್ತಾನೆ, ಮತ್ತು ದೇವರ ಹಾಗೆ ಅಧಿಕಾರವನ್ನು ಚಲಾಯಿಸುತ್ತಾನೆ. ಸ್ತ್ರೀಯು ಪುರುಷನ ಪ್ರಭಾವವನ್ನು ಪ್ರತಿಬಿಂಭಿಸುತ್ತಾಳೆ, ಯಾಕೆಂದರೆ ಅವಳು, ಅವನ ಪಕ್ಕೆಯಿಂದ ತೆಗೆಯಲ್ಪಟ್ಟು, ಅವನಿಗಾಗಿ ನಿರ್ಮಾಣಗೊಂಡಿದ್ದಾಳೆ. ಇದರ ಹಿಂದಿನ ಅರ್ಥವೇನೆಂದರೆ, ಅವಳು ಅವನಿಗೆ ಸಹಾಯಕಿಯಾಗಿದ್ದಾಳೆ, ಆದರೆ ಅವನ ಸ್ವಾರ್ಥಕ್ಕೆ ಗುಲಾಮಳಲ್ಲ.

2. *ದೇವದೂತ ಶಾಸ್ತ್ರದ ತರ್ಕ.* "ದೂತರ ನಿಮಿತ್ತವಾಗಿ" ಸ್ತ್ರೀಯು ಮುಸುಕನ್ನು ಧರಿಸಬೇಕು (ವಚನ 10). ದೈವಶಾಸ್ತ್ರದ ಅಂತ್ಯದಲ್ಲಿ ಈ ಒಂದು ತರ್ಕವನ್ನು ನೀಡಲಾಗಿದೆ, ಈ ಹೇಳಿಕೆಯ ಕುರಿತಾಗಿ ಮುಂದೆ ನಾವು ನೋಡುತ್ತೇವೆ.

3. *ಸಾಮಾಜಿಕವಾದ ತರ್ಕ.* ಇದು ಸಮಾಜಕ್ಕೆ ಅನ್ವಹಿಸುವದರಿಂದ, ಇದನ್ನು "ಸಾಮಾಜಿಕವಾದ ತರ್ಕ" ಎಂದು ಪರಿಗಣಿಸುತ್ತೇವೆ. ವಚನ 13ರಿಂದ 15ರವರೆಗೆ ಪೌಲನು ಕೊರಿಂಥದವರಿಗೆ, ಯಾವುದು ಮಾನ್ಯವು ಮತ್ತು ಯೋಗ್ಯವು ಅದನ್ನೇ ನ್ಯಾಯವಾಗಿ ನಡಿಸಿರಿ ಎಂದು ಮನವಿ ಮಾಡಿರುವನು. ಆತನು ಹೇಳಿದ್ದೇನೆಂದರೆ, "ನಾನು ಹೇಳುವದನ್ನು ನೀವೇ ಯೋಚಿಸಿರಿ" (ವಚನ 10:15). "ಸ್ತ್ರೀಯು ಮುಸುಕನ್ನು ಧರಿಸದೆ, ಪ್ರಾರ್ಥಿಸುವಂಥದ್ದು ಯೋಗ್ಯವೇ? ಪುರುಷನು ತನ್ನ ಉದ್ದವಾದ ಕೂದಲನ್ನು ಕತ್ತರಿಸುವುದು, ಸ್ತ್ರೀಯು ಕೂದಲನ್ನು ಉದ್ದವಾಗಿ ಬೆಳೆಸುವುದು ಪ್ರಕೃತಿ ನಿಯಮವಲ್ಲವೇ? ಸ್ತ್ರೀಯು ಉದ್ದವಾದ ಕೂದಲನ್ನು ಹೊಂದಿರುವ ಪರಿಸ್ಥಿತಿಯೇ, ಆಕೆಯು ಸಭೆಯಲ್ಲಿ ಮುಸುಕುಧರಿಸಬೇಕು ಎಂಬ ಸೂಚನೆಯಲ್ಲವೇ?"

4. *ಕ್ರೈಸ್ತ ಧರ್ಮದ ಬೋಧನೆಯ ತರ್ಕ.* ಇದು ಪೌಲನ ಅಂತಿಮವಾದ ತರ್ಕವಾಗಿದೆ, ಸಭೆಯ ಕಾರ್ಯಕ್ಷಮತೆಗೆ ಮನವಿಯಾಗಿದೆ: "ಒಬ್ಬನು ವಾಗ್ವಾದ ಪ್ರಿಯನಾಗಿ ಕಾಣಿಸಿಕೊಂಡರೆ ಇಂಥ ಪದ್ಧತಿ ನಮ್ಮಲಿಲ್ಲ. ಮತ್ತು ದೇವರ ಸಭೆಗಳಲ್ಲಿಯೂ ಇಲ್ಲ ಎಂದು ತಿಳುಕೊಳ್ಳಿರಿ" (ವಚನ 16). ಈ ನಿಮಿತ್ತ ಒಬ್ಬನು ತೊಂದರೆಯನ್ನು ಉಂಟುಮಾಡುವದಾಗಿದ್ದರೆ, ಈ ಪಾಠವನ್ನು ಕಡೆಗಣಿಸಬೇಕು ಎಂಬ ಅರ್ಥವಲ್ಲ. "ಪೌಲನು ಈ ವಿಷಯದ ಕುರಿತು, ಆಳವಾದ ಅಧ್ಯಾಯನವನ್ನು ನೀಡಿ, ನಂತರ, ಒಂದೇ ಒಂದು ಹೇಳಿಕೆಯಿಂದ ಈ ವಿಷಯವನ್ನು ಕಡೆಗಣಿಸುವನೇ. ಇನ್ನೂ ಈ ಕುರಿತು ಯಾರಾದರು ವಾಗ್ವಾದವನ್ನು ಮಾಡುವದಾದರೆ, ಇದು ನಮ್ಮ ಪದ್ಧತಿಯೂ ಆಗಿರುವದಿಲ್ಲ ಅಥವಾ ಸಭೆಯ ಪದ್ಧತಿಯು ಆಗಿರದೆ ಇರುವದರಿಂದ, ಇದರ ಕುರಿತ ತರ್ಕ ಸಲ್ಲದು ಎಂಬುದಾಗಿ ಹೇಳದೆ ಇರುವದನ್ನು ನೆನಪು ಮಾಡಿಕೊಳ್ಳೋಣ." ಇದರ ತರ್ಕಕ್ಕೆ ಸರಿಯಾದ ಉತ್ತರವನ್ನು ನೀಡಲೇಬೇಕೆಂಬ ಪೌಲನ ವಾಗ್ವಾದವು ಆಗಿರದೆ, "ಸ್ತ್ರೀಯರು ಮುಸುಕನ್ನು ಧರಿಸಬೇಕೆಂಬ ತರ್ಕವನ್ನು ಇನ್ನೂ ಮುಂದವರಿಸುವದಾದರೆ" "ಇದು ಅಪೊಸ್ತಲರ ನಿಯಮವಾಗಲಿ ಅಥವಾ ಸಭೆಯ ಪದ್ಧತಿಯಾಗಲಿ ಆಗಿರುವದಿಲ್ಲ" ಎಂದು ಪೌಲನು ತಿಳಿಸುತ್ತಿದ್ದಾನೆ.

## ಪ್ರಶ್ನೆಗಳ ಉದ್ಭವ

ಪೌಲನ ಬೋಧನೆಗಳ ನಿಮಿತ್ತ ಉದ್ಭವಿಸಿರುವ ಕೆಲವು ಪ್ರಶ್ನೆಗಳನ್ನು ನೋಡೋಣ. ಈ ಪ್ರಶ್ನೆಗಳಿಗೆ ಅಲ್ಪವಾಗಿ ಸ್ಪಂದಿಸುವ ಮೂಲಕ, ಈ ಸಮಸ್ಯೆಗಳನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳೋಣ.

1. ಇಲ್ಲಿ ಪೌಲನು ಮುಸುಕಿನ ಕುರಿತಾಗಿಯೇ, ಮಾತನಾಡಿರುವನೋ? ಅನೇಕ ಅಭಿಪ್ರಾಯಗಳು ಇಲ್ಲಿರುತ್ತವೆ, ಅವಳಿಗೆ ಮುಸುಕಿನ ಬದಲಾಗಿ, ಉದ್ದವಾದ ಕೂದಲನ್ನು ನೀಡಲಾಗಿದೆ (ಗ್ರೀಕ್.: *ಅಂಟಿ* ಇದರ ಅರ್ಥ "ಬದಲಾಗಿ") ಮುಚ್ಚುವ ಬದಲಾಗಿ "ಅಂಟಿ"

ಎಂಬ ಗ್ರೀಕ್ ಪದವು ಸಾಮಾನ್ಯವಾಗಿ, ಇದರ ಬದಲಾಗಿ ಎಂಬ ಅರ್ಥವನ್ನು ನೀಡುತ್ತದೆ. ಮುಸುಕಿನ ಬದಲಾಗಿ, ಸ್ತ್ರೀಯು ಉದ್ದವಾದ ಕೂದಲನ್ನು ಹೊಂದಿರ ಬೇಕು ಎಂಬ ಸರಳ ವಾದ ಸಲಹೆಯನ್ನು ನೀಡುತ್ತದೆ. ಅದಕ್ಕಿಂತಲೂ ಹೆಚ್ಚಿನದು ಇರುವದಿಲ್ಲ, ಆದರೆ ಈ ವಿಷಯವು ವಚನ 5 ಮತ್ತು 6ಕ್ಕೆ ಒಳಪಡುವದಿಲ್ಲ. ತಲೆಯನ್ನು ಮುಚ್ಚುವದಕ್ಕೆ, ಕೇವಲ ಉದ್ದ ವಾದ ಕೂದಲು ಸಾಕಾಗಿದ್ದರೆ, ಅವರು ಮುಚ್ಚಲಿಲ್ಲ ಎಂಬ ತರ್ಕವು ಅರ್ಥವಿಲ್ಲದ್ದಾಗುತ್ತದೆ, ಯಾಕೆಂದರೆ ಮುಚ್ಚದೆ ಇರುವುದು, ತಲೆಯನ್ನು ಬೋಳಿಸಿದಂತೆಯೇ, ಇದು ಪೌಲನು ಬೋಧಿ ಸಿದ ಸತ್ಯದ ತರ್ಕವಾಗಿದೆ.

ಮುಚ್ಚುವಂಥದ್ದು, ನಿರ್ದಿಷ್ಟವಾದ ಕೇಶಶೃಂಗಾರವನ್ನು ಸೂಚಿಸುತ್ತದೆ ಎಂಬ ಇನ್ನೊಂದು ಅಭಿಪ್ರಾಯವೂ ಸಹ ಇರುತ್ತದೆ. ಒಂದು ವೇಳೆ ಸ್ತ್ರೀಯು ಕೂದಲನ್ನು ನೆತ್ತಿಯ ಮೇಲೆ ಭದ್ರಪಡಿಸಿದ್ದರೆ, ಅವಳು ಅದನ್ನು ಮುಚ್ಚಲೇಬೇಕು. ಅಥವಾ ಅವಳ ಕೂದಲ ಶೃಂಗಾರ ಸರಿಇಲ್ಲದಿದ್ದರೆ, ಅಥವಾ ಅವ್ಯವಸ್ಥೆಯಲ್ಲಿರುವದಾದರೆ, ಅದನ್ನು ಮುಸುಕಿನಿಂದ ಮುಚ್ಚಬೇಕು. 4ನೇ ವಚನದಲ್ಲಿ, ಗ್ರೀಕರ ತೋರ್ಪಡಿಸಿಕೊ ಳ್ಳುವ ಅಭಿಪ್ರಾಯವನ್ನು ನೋಡುತ್ತೇವೆ. ಅದರ ಅಕ್ಷರಶಃ ಅರ್ಥ "ತಲೆಯಿಂದ, ಕೆಳಭಾಗದವರೆಗೂ ಹೊಂದಿರುವದು." ಇದು ಪ್ಲೂಟಾರ್ಚನ ತರ್ಕಕ್ಕಿಂತಲೂ ಮಿಗಿಲಾದದ್ದು, ಅವನು "ತಲೆಯನ್ನು ಬಟ್ಟೆಯಿಂದ ಮುಚ್ಚಬೇಕು" ಎಂದು ಹೇಳಿದ್ದನು.[8] ಆದುದರಿಂದ ಲೆಕ್ಸಿಕನ್ನರೂ ಮತ್ತು ತರ್ಜುಮೆಯು, ತಲೆಗೆ ಮುಸುಕು ಧರಿಸುವ ಕುರಿತು ಸಮಾನವಾದ ತರ್ಕವನ್ನು ಹೊಂದಿದ್ದಾರೆ.

2. ವಚನ 10ರಲ್ಲಿ ಇರುವ ವ್ಯಾಖ್ಯಾನದ ಅರ್ಥವೇನು: "ದೂತರ ನಿಮಿತ್ತ ವಾಗಿ ಸ್ತ್ರೀಯು ಪುರುಷನ ಅಧಿಕಾರ ಸೂಚಿಸುವ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರ ಬೇಕು"? ಅಧಿಕಾರದ ಸೂಚನೆಗಾಗಿ ಈ ಗುರುತು ಅಸಹಜ ಲಕ್ಷಣ ವಾಗಿತ್ತು: ಎಂದು ಪೌಲನು ಉಪಯೋಗಿಸುತ್ತಿರುವನೇ, ಅವಳು ಮುಸುಕನ್ನು ಹಾಕುವ ಕ್ರಿಯೆಯು ಆಕೆಯು ಯಾರಿಗೆ, ಅಧಿನಳಾಗಿರುವಳು ಎಂಬ ಸೂಚನೆಯನ್ನು ನೀಡುತ್ತದೆ.[9] ಇದು "ದೇವದೂತರ ನಿಮಿತ್ತವಾಗಿ, ಯಾಕೆ ಅವಶ್ಯವಿತ್ತು"? ಒಂದು ವೇಳೆ ದೇವದೂತರುಗಳು, ದೈವೀಕ ಸೃಷ್ಟಿಯ ನಿಯಮಗಳನ್ನು ಎತ್ತಿ ಹಿಡಿದಿರಬಹುದು. ಒಂದು ವೇಳೆ ಆರಾಧನೆಯಲ್ಲಿ ದೇವದೂತರುಗಳು ದೇವರ ಪ್ರತಿನಿಧಿಗಳಾ ಗಿರಬಹುದು (ಕೀರ್ತನೆ 138:1ನ್ನು ನೋಡಿರಿ) ಕುಮ್ರಾನ್ ಬರವಣಿಗೆಗಳಲ್ಲಿಯೂ,[10] ಇದಕ್ಕೆ ಸಮಾನವಾದ ತರ್ಕಗಳುಂಟು.

3. 1 ಕೊರಿಂಥ 14:34 ಪೌಲನ ಹೇಳಿಕೆಗೆ ತದ್ವಿರುದ್ಧವಾಗಿ ಪೌಲನು ಇಲ್ಲಿ ಬೋಧಿ ಸುತ್ತಿರುವನೇ ("ಸ್ತ್ರಿಯರು ಸಭೆಗಳಲ್ಲಿ ಮೌನವಾಗಿರಬೇಕು") ಮತ್ತು 1 ತಿಮೊಥೆ 2:12 (ಉಪದೇಶ ಮಾಡುವದಕ್ಕಾಗಲಿ, ಪುರುಷರ ಮೇಲೆ ಅಧಿಕಾರ ನಡೆಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವದಿಲ್ಲ, ಅವರು ಮೌನವಾಗಿರಬೇಕು)? ಇಲ್ಲ; ಆ ವಾಕ್ಯಗಳಲ್ಲಿ ಅವನು ಸ್ತ್ರೀಯರು ಸಭೆಯಲ್ಲಿ ಮೌನವಾಗಿರಬೇಕೆಂದು ಮಾತ್ರ ಮಾತನಾಡುತ್ತಿದ್ದಾನೆ.[11] ಈ ವಾಕ್ಯದಲ್ಲಿ ಅವನು, ಸಭೆಯಲ್ಲಿ ಸ್ತ್ರೀಯರು ಅಧೀನರಾಗಿರಬೇಕೆಂಬ ವಿಷಯವನ್ನು ತಿಳಿಸುತ್ತಿದ್ದಾನೆ. 1 ಕೊರಿಂಥ 11:5, ಹೇಗೂ ಸ್ತ್ರೀಯರು ಪ್ರಾರ್ಥಿಸುವ ಪ್ರವಾದಿಸುವ ಬಗ್ಗೆಯೂ ಮಾತನಾಡುತ್ತಿದ್ದಾನೆಯೋ? ಹೌದು ಆದರೆ ಇಲ್ಲಿ ಪೌಲನು ಮುಗಿದುಹೋದ ವಾಯು ರೂಪದ ಅವಧಿಯ ಬಗ್ಗೆ ತಿಳಿಸುತ್ತಿದ್ದಾನೆ, ಇಲ್ಲಿ ಸ್ತ್ರೀಯು, ದೇವರಾತ್ಮನ ಪ್ರೇರಣೆಯಿಂದ ಪ್ರಾರ್ಥನೆಯನ್ನಾಗಲೀ ಅಥವಾ ಪ್ರವಾದ ನೆಯನ್ನಾಗಲೀ ಮಾಡಿದರೂ ಮುಸುಕು ಹಾಕಿದವ ಳಾಗಿ ಮಾಡಬೇಕು.

4. ಪೌಲನು, ಮುಸುಕು ಧರಿಸುವ ಈ ಬೋಧನೆಯು, ಈ ದಿವಸಗಳಿಗೆ ಅನ್ವಯಿಸುತ್ತ ವೆಯೇ? ಇಲ್ಲ, ಎಂಬುದೇ ನನ್ನ ಸಲಹೆ. ಕೊರಿಂಥ ಸಭೆಯಲ್ಲಿ ಸ್ತ್ರೀಯರು ಮುಸುಕಿಲ್ಲದೆ ಇರುವಂಥ ಪರಿಸ್ಥಿತಿಯು, ಆ ಸಮೂಹಕ್ಕೆ ಅವಮಾನಕರವಾಗಿರುತ್ತಿತ್ತು. "ಪವಿತ್ರವಾದ ಮುದಿಟ್ಟು ಒಬ್ಬರನೊಬ್ಬರು ವಂದಿಸಿರು" (ರೋಮಾಪುರ 16:16ಎ). ಈ ಸಂಪ್ರದಾಯವು

ಬದಲಾಗಿದೆ, ಇಲ್ಲಿ ಪೌಲನು ಇತರರ ಸಂಪ್ರದಾಯವು, ನಮ್ಮ ಸಮಾಜಕ್ಕೆ ಅನರ್ಥ ಎಂಬುದನ್ನು ತೋರಿಸಿಕೊಟ್ಟಿದ್ದಾನೆ.

5. ಪೌಲನು ಬೋಧಿಸಿದ ಉದ್ದವಾದ ಕೂದಲು ಮತ್ತು ಚಿಕ್ಕದಾದ ಕೂದಲಿನ ವಿಷಯವು, ಈ ದಿನಗಳಿಗೆ ಅನ್ವಹಿಸುತ್ತವೆಯೇ? ಎಷ್ಟು ಉದ್ದ, ಎಷ್ಟು ಚಿಕ್ಕದು, ಮತ್ತು ಎಲ್ಲಿಯವರೆಗೆ, ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಇದನ್ನು ಪೌಲನು ಸಾಮಾಜಿಕ ಚೌಕಟ್ಟಿಗೆ ಒಳಪಡುವ ಸಂಬಂಧಕ್ಕೆ ಸೇರಿಸಿದ್ದಾನೆ. ಇಲ್ಲಿ ಕೊರಿಂಥದವರಿಗೆ ಯಾವ ರೀತಿಯಲ್ಲಿ ಅವಶ್ಯವಿತ್ತು ಮತ್ತು ಅದು ಹೇಗೆ ಸನ್ನಿಹವಾಗುತ್ತಿತ್ತು ಎಂದು ಪೌಲನು ತರ್ಕಿಸುವವನಾಗಿದ್ದಾನೆ, "ಸೃಷ್ಟಿಯ ನಿಯಮವೇ ಇದನ್ನು ನಿಮಗೆ ತಿಳಿಸುವದಿಲ್ಲವೇ?" ಎಂದು ಪೌಲನು ಕೇಳುತ್ತಿದ್ದಾನೆ. ಅಂದರೆ ಸ್ವಾಭಾವಿಕ ವಾದ ವಾಸ್ತು ಅಂಶ ಎಂಬ ಅರ್ಥವೇ ವಿನಃ ಸ್ವಾಭಾವಿಕ ನಿಯಮವೆಂಬುದಾಗಿ ಹೇಳುತ್ತಿಲ್ಲ. ಈ ಆಲೋಚನೆಯು ತರ್ಕದ ಮೇರೆಗೆ "ನಿಮ್ಮನ್ನು ನೀವೇ - ತೀರ್ಪುಮಾಡಿಕೊಳ್ಳಿರಿ" ಕೂದಲಿನ ವಿಷಯವಾಗಿ ಅನೇಕ ಬಲವಾದ ಹೇಳಿಕೆಗಳು,ಈ ದಿವಸಗಳಲ್ಲಿ ಇದ್ದರೂ ಸಹ, ಪೌಲನ ಸಾಮಾಜಿಕವಾದ ಚೌಕಟ್ಟಿನ ತರ್ಕವು ಉಪಯೋಗಕ್ಕೆ ಸರಿ ಇಲ್ಲದೆ ಇರಬಹುದು (ಸಮಾಜಕ್ಕೆ ಸಂಬಂಧಪಟ್ಟ) ಅದನ್ನು ನೈತಿಕ ಕಾರ್ಯ ಎಂಬುದಾಗಿ, ಈ ದಿನದ ಜನರಿಗೆ ಹೊಲಿಸಲು ಅಸಾಧ್ಯ.

## ಮುಕ್ತಾಯ

ಕೊರಿಂಥದಲ್ಲಿ ಉದ್ಭವಿಸಿದ್ದ ಪರಿಸ್ಥಿತಿ, ಈ ಕುರಿತ ಪೌಲನ ಬೋಧನೆಗಳು, ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಮಾರ್ಗದಲ್ಲಿ, ಕೆಲವೇ ಗುರುತುಗಳನ್ನು ನೋಡಿ, ಪ್ರಯಾಣ ಮಾಡಲು ಕಷ್ಟವಾಗುತ್ತದೆ, ಆದರೆ ಕೆಲವು ಸತ್ಯಗಳು ಸ್ಪಷ್ಟವಾಗಿವೆ. ಲಿಂಗಬೇದವಿರುವ ಸ್ತ್ರೀಯರಿಗಾಗಿ ಕ್ರೈಸ್ತತ್ವವು ಬರಲಿಲ್ಲ. ಅದು ಆಕೆಯನ್ನು ಮೇಲೇರಿಸಿ ಗೌರವಿಸುತ್ತದೆ. ಕ್ರಿಸ್ತನಲ್ಲಿ ಗಂಡು ಹೆಣ್ಣು ಎಂಬ ಬೇದವಿಲ್ಲ. ಇದರ ವ್ಯಾಖ್ಯಾನದ ಪೂರ್ಣ ವಿವರ, "ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನೂ ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂಬೇದವಿಲ್ಲ" (ಗಲಾತ್ಯ 3:28). ಪೌಲನು ಯೆಹೂದ್ಯರ ಮತ್ತು ಗ್ರೀಕರ ಮಧ್ಯದಲ್ಲಿರುವ ವ್ಯತ್ಯಾಸಗಳನ್ನು ಗ್ರಹಿಸಿದನು. ಯಜಮಾನನಾದ ಫಿಲೆಮೋನನ ಮತ್ತು ದಾಸನಾದ ಓನೇಸೀಮನ ನಡುವೆ ಇದ್ದ ವ್ಯತ್ಯಾಸವನ್ನು ಕಂಡುಹಿಡಿದನು, ಮತ್ತು ಪೌಲನು ಸ್ತ್ರೀ ಪುರುಷರ ನಡುವೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಿರಿ. ಎಂಬುದಾಗಿ ಕೊರಿಂಥದವರಿಗೆ ಹೇಳಿದನು. ಅವನ ತರ್ಕವು ಕೇವಲ ಸಾಮಾಜಿಕವಾಗಿರದೇ; ಅದು ದೈವಶಾಸ್ತ್ರದಂತೆಯೂ ಇತ್ತು. ಆತನು ಪುನಃ ಪುನಃ ಸೃಷ್ಟಿಯ ಕ್ರಮವನ್ನು ನೆನಪು ಮಾಡಿದನು. ಸಂಪ್ರದಾಯಕ್ಕಾಗಲಿ, ಸಂಸ್ಕೃತಿಗಾಗಲೀ, ಸೃಷ್ಟಿಯ ನಿಯಮವು ತದ್ವಿರುದ್ಧವಾಗಿರುವದರಿಂದ, ಇದು ಎಲ್ಲಾ ಕಾಲಕ್ಕು ಅನ್ವಹಿಸುತ್ತದೆ, ಎಲ್ಲಾ ಸ್ಥಳಗಳಿಗೂ ಅನ್ವಹಿಸುತ್ತದೆ. ಸ್ತ್ರೀ ಪುರುಷರಲ್ಲಿ ಬಾಹಿರ ವ್ಯತ್ಯಾಸಗಳು ಇರುತ್ತವೆ. ಅದನ್ನು ಪರಿಗಣಿಸಲೇಬೇಕು. ಹೇಗೂ ಕ್ರಿಸ್ತನಲ್ಲಿ - ಅಂದರೆ ಆತ್ಮೀಕವಾಗಿ ಮಾತನಾಡಿದರೆ - ಎಲ್ಲರೂ ಒಂದೇ ಆಗಿದ್ದಾರೆ. ಕ್ರಿಸ್ತಯೇಸುವಿನ ಧರ್ಮ ಎಲ್ಲರನ್ನು ಒಟ್ಟುಗೂಡಿಸುತ್ತದೆ.

---

ಟಿಪ್ಪಣೆಗಳು

[1]ಇದನ್ನು ನೀಲ್ ಲೈಟ್ ಫುಟ್ ಅಪ್ಪಣೆಯ ಮೇರೆಗೆ ಮುದ್ರಿಸಲಾಗಿದೆ. [2]Charillus, *Sayings of Spartans*, 2. [3]Plutarch, *The Roman Questions*, 14. [4]Ibid. [5]Sir William Ramsay, *The Cities of St. Paul* (London: Hodder and Stroughton, 1907; reprint, Grand Rapids, Mich.: Baker Book House, 1960), 201-05. [6]Jeremias, *Jerusalem in the Time of Jesus,* 359-60. [7]On varying customs of ancient veiling, a good source is *Theological Dictionary of the*

*New Testament,* ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 3:562. [8]Plutarch, *Sayings of Romans,* 13. [9]Compare with *Theological Dictionary of the New Testament,* 2:574. [10]J. A. Fitzmyer, "A Feature of Qumran Angelogy and the Angels of 1 Cor. 11:10," *New Testament Studies* (1957), 4:48-58; H. J. Cadbury, "A Qumran Parallel to Paul," *Harvard Theological Review* (1958), 51:1-2.

[11]J. W. Roberts discussed 1 Timothy 2 referring to the assembly in *Letters to Timothy,* The Living Word Series (Austin, Tex.: Sweet Publishing Co., 1961), 19.

# 1 ಕೊರಿಂಥದವರಿಗೆ 11

## J. W. ಮ್ಯಾಕ್‌ಗಾರ್ವೆ

ಕೊರಿಂಥವು, ಗ್ರೀಕ್, ರೊಮಾಯರು, ಹಾಗೂ ಯೆಹೂದ್ಯರನ್ನು ಒಳಗೊಂಡಿತ್ತು ಪೌಲನು ಬರೆದಂಥ ಸಭೆಗಳಲ್ಲಿ, ಈ ಮೂರು ಗುಂಪಿನವರೂ ಇದ್ದರು. ಯೆಹೂದ್ಯರು ಮತ್ತು ರೊಮಾಯರು ತಲೆಗೆ ಮುಸುಕನ್ನು ಧರಿಸಿ ಆರಾಧಿಸುತ್ತಿದ್ದರು; ಗ್ರೀಕರು, ಮುಸುಕು ಹಾಕುತ್ತಿರಲಿಲ್ಲ. ಸ್ವಭಾವಿಕವಾಗಿ, ಯಾವ ಸಂಪ್ರದಾಯವು ಸರಿಯಾದದ್ದು ಎಂದು ವಾಗ್ವಾದ ಉಂಟಾಗುತ್ತದೆ. ಇದರಲ್ಲಿ ಸ್ತ್ರೀಯರ ಕುರಿತಾಗಿಯೇ, ಉಂಟಾಗುವ ಸಂದೇಹದ ನಿಮಿತ್ತ, "ಆತ್ಮೀಕ ಪರಿಸರದಲ್ಲಿ ಗಂಡು ಹೆಣ್ಣು ಎಂಬ ಬೇಧವಿರುವದಿಲ್ಲ" (ಗಲಾತ್ಯ 3:28), ಈ ವಿವಾದ ವನ್ನು ಪರಿಗಣಿಸಿದರೆ, ಅಲ್ಲಿ ಗೊಂದಲ ಉಂಟಾಗುತ್ತದೆ. ಆದುದರಿಂದ ಗ್ರೀಕರಂತೆ ತಲೆಗೆ ಮುಸುಕು ಹಾಕಿಕೊಳ್ಳದೆ, ಆರಾಧಿಸಬಹುದು ಎಂದು ಕೆಲವರ ಅನಿಸಿಕೆಯಾಗಿತ್ತು. ಪೌಲನ ದಿವಸದ, ಪೂರ್ವ ದೇಶಗಳಲ್ಲಿ ಎಲ್ಲಾ ಸ್ತ್ರೀಯರು ಮುಸುಕು ಧರಿಸಿದವರಾಗಿ, ಸಾರ್ವಜನಿಕ ಸ್ಥಳಗಳಿಗೆ ಹೋಗುತ್ತಿದ್ದರು; ಮುಸುಕು ಧರಿಸುವಂಥದ್ದು, ಅಧೀನತೆಯ ದ್ಯೋತಕವಾಗಿತ್ತು, ಅಂದರೆ ಸ್ತ್ರೀಯರು ಪುರುಷರ ಅಧಿಕಾರಕ್ಕೆ ಒಳಪಟ್ಟಿದ್ದಾರೆ ಎಂಬ ಗುರುತ್ತಾಗಿತ್ತು. ಪರ್ಷಿಯದ ಸ್ತ್ರೀಯರು ಸಹ ಮುಸುಕನ್ನು ಧರಿಸಿ, "ಅಧೀನತೆಯನ್ನು" ತೋರ್ಪಡಿಸಿದ್ದರು ಎಂದು ಪ್ರವಾಸಿ ಯಾದ ಚಡ್ರೀನನು ಸಹ ತಿಳಿಸಿದ್ದಾನೆ. ಇದನ್ನೇ ಪೌಲನು ಈ ಅಧ್ಯಾಯದಲ್ಲಿ ಬರೆದಿದ್ದಾನೆ.

ಮುಸುಕು ಹಾಕಿಕೊಳ್ಳುವ, ಈ ಗುರುತರವಾದ ವಿಷಯವು ವಿವಾದಕ್ಕೆ ಸಿಲುಕಿತು, ಪುರುಷನು ತಲೆಯನ್ನು ಮುಚ್ಚಿಕೊಂಡವನಾಗಿ ಆರಾದಿಸಿದರೆ, ಅದು ನಾಚಿಕೆಯ ಕ್ರಿಯೆಯಾಗಿತ್ತು; ಅದೇ ರೀತಿಯಲ್ಲಿ ಸ್ತ್ರೀ, ಮುಸುಕನ್ನು ಧರಿಸದೆ ಆರಾಧಿಸಿದರೆ, ಅದು ಸಹ ಅವಮಾನಕರವಾಗಿತ್ತು, ಅದು ಒಂದು ಸ್ವತಂತ್ರದ ಉಪಯೋಗವಾಗಿ, ಸ್ತ್ರೀ ತಾನು ತನ್ನ ನೈತಿಕತೆಯನ್ನು ಬದಿಗಿರಿಸಿ, ಧೈರ್ಯ ತಂದುಕೊಂಡಂತಹ ವಿಷಯವಾಗಿತ್ತು.

ಕ್ರೈಸ್ತರು, ರಾಷ್ಟ್ರೀಯ ಸಂಪ್ರದಾಯದಿಂದ, ಅನಾವಶ್ಯವಾಗಿ ಹೊರಬರಬೇಕು ಎಂದು ಈ ವಾಕ್ಯಭಾಗದಲ್ಲಿ ಹೇಳುತ್ತಿಲ್ಲವೆಂದು ಸರಳವಾಗಿ ತಿಳಿಯುತ್ತೇವೆ. ಈ ರೀತಿ ಯಾದಂತಹ ಅನಾವಶ್ಯಕವಾದಂತ ಸಂಗತಿಗಳನ್ನು ಪರಿಚಯಿಸುವ ಮೂಲಕ, ಕ್ರೈಸ್ತರು ಅಪಾರ್ಥಕ್ಕೊಳಗಾಗಿ ಹಿಂಸೆಯನ್ನು ಅನುಭವಿಸಬೇಕಿತ್ತು. ಕ್ರಿಸ್ತನನ್ನು ಹಿಂಬಾಲಿಸುವವನು, ಪ್ರಪಂಚದಲ್ಲಿ ವ್ಯತ್ಯಾಸವುಳ್ಳ ಜೀವಿತವನ್ನು ಜೀವಿಸುತ್ತಾನೆ. ಯಾವುದೇ ಕಪಟತನವನ್ನು ತೋರಿ ಸದೆ ಪೌಲನು ಈ ರೀತಿಯಾಗಿ ಬರೆದಿದ್ದಾನೆ,

> ತಲೆಯ ಮೇಲೆ ಮುಸುಕು ಹಾಕಿಕೊಳ್ಳದೆ ಪ್ರಾರ್ಥನೆಯನ್ನಾಗಲಿ ಪ್ರವಾದನೆ ಯನ್ನಾಗಲಿ ಮಾಡುವ ಸ್ತ್ರೀಯು ತನ್ನ ತಲೆಯನ್ನು ಅವಮಾನಪಡಿಸುತ್ತಾಳೆ. ಸ್ತ್ರೀಯು ಮುಸುಕಿಲ್ಲದಿರುವದೂ ತಲೆಬೋಳಿಸಿಕೊಂಡಿರುವದೂ ಒಂದೇ. ಸ್ತ್ರೀಯು ಮುಸುಕುಹಾಕಿಕೊಳ್ಳದಿದ್ದರೆ ಆಕೆಯು ಕೂದಲನ್ನು ತೆಗಿಸಿಬಿಡ ಬೇಕಷ್ಟೆ. ಆದರೆ ಕೂದಲನ್ನು ಕತ್ತರಿಸಿಕೊಳ್ಳುವದಾಗಲಿ ತಲೆಬೋಳಿಸಿಕೊಳ್ಳುವದಾಗಲಿ ಸ್ತ್ರೀಗೆ ಅವಮಾನಕರವಾಗಿದ್ದರೆ ಆಕೆಯು ಮುಸುಕನ್ನು ಹಾಕಿಕೊಳ್ಳಲಿ (ವಚನಗಳು 5, 6).

ಮುಸುಕು ಧರಿಸದ ಸ್ತ್ರೀಯನ್ನು, ಅಪ್ಪಣೆಯ ಮೂಲಕ ಪೌಲನು ನಿರಾಕರಿಸದೆ, ಅದು ನ್ಯಾಯವಾದದ್ದು, ಯೋಗ್ಯವಾದದ್ದು ಎಂದು ಬಯಸಿದನು. ಆಕೆಯು ಬೇಕೆಂತಲೇ

ಮುಸುಕನ್ನು ಧರಿಸದೆ ಹೋದರೆ, ಅವಳು ಗಂಡನಿಗೆ ಅಧೀನವಾಗುವ ವಿಷಯದಲ್ಲಿ ಕಠಿಣಳಾಗಿದ್ದಾಳೆ ಎಂಬುದಾಗಿ ಈ ಕ್ರಿಯೆಯು ಅವಳನ್ನು ವೇಶ್ಯೆಯ ಮಟ್ಟದು ಎಂದು ಗುರುತಿಸುತ್ತಿತ್ತು. ಅವಳು ಮುಸಕಿಲ್ಲದ ತನ್ನ ತಲೆಯನ್ನು ತೋರಿಸುವವಳಾಗಿದ್ದಳು. ಅಥವಾ ವ್ಯಭಿಚಾರಿಣಿಯಂತಿರುತ್ತಿದ್ದಳು ಅವಳ ತಲೆಯನ್ನು ಬೋಳಿಸುವುದೇ ತಕ್ಕ ಪ್ರಾಯಶ್ಚಿತ್ತವ ಾಗಿತ್ತು. ಆದುದರಿಂದ ಎಲ್ಲಿ ಜನರು, ಸ್ತ್ರೀಯರನ್ನು ಈ ಕೆಳ ಮಟ್ಟದಲ್ಲಿ ನೋಡುತ್ತಿದ್ದರೋ, ಅಂಥ ಸ್ತ್ರೀಯರು ಸ್ವಯಂ ಪ್ರೇರಿತರಾಗಿ, ಗರುತುಗಳನ್ನು ಪದಕಗಳನ್ನು ಧರಿಸುವ ಮೂಲಕ, ಅವಮಾನದಿಂದ ಹೊರ ಉಳಿಯಬಹುದಿತ್ತು.

ಈ ರೀತಿಯಾದ ಮಾನವನ ಸಂಪ್ರದಾಯದ ನಿಯಮವನ್ನು ತಿಳಿಸಿದ ನಂತರ, ಪೌಲನು ಇದೇ ನಿಯಮವು ದೈವೀಕ ಮತ್ತು ಸೃಷ್ಟಿಯ ಸಂಬಂಧಗಳಿಗೂ ಅನ್ವಹಿಸುತ್ತದೆ ಎಂದು ತಿಳಿಸುತ್ತಿದ್ದಾನೆ. "ಪುರುಷನಿಗೆ ದೇವರ ಪ್ರತಿರೂಪವು ಪ್ರಭಾವವು ಆಗಿರುವದರಿಂದ ..." (ವಚನ 7). ಮನುಷ್ಯನು ಬದಲಾಗಿ ಇನ್ನಾವುದೆ, ಉನ್ನತ ಸೃಷ್ಟಿಯು ಇರುವದಿಲ್ಲ (ಆದಿಕಾಂಡ 1:27; ಕೀರ್ತನೆ 8:6). ಅವನ ಸೃಷ್ಟಿಯಲ್ಲಿಯೇ, ಪ್ರಭಾವವನ್ನು ಹೊಂದಿರಲಾಗಿ, ದೇವರ ಮಗನ ಬರುವಿಕೆಯ ಮೂಲಕ, ಅವನ ಇರುವಿಕೆಯ ಉನ್ನತ ಸ್ಥಾನಕ್ಕೇರಿ ಅವನಿಗೆಮಹಿಮೆವುಂಟಾಯಿತು (ಇಬ್ರಿಯ 1:2, 3). ಕ್ರಿಸ್ತನೊಂದಿಗೆ, ಮಾನವನು ಹೊಂದಿರುವಂತ ಅನ್ಯೋನ್ಯತೆಯ ನಿಮಿತ್ತ ಅವನು ತಂದೆಯಾದ ದೇವರ ಸನ್ನಿಧಿಯಲ್ಲಿ ಮುಸುಕು ಇಲ್ಲದವನಾಗಿ ನಿಲ್ಲಲು ಯೋಗ್ಯನಾಗಿದ್ದಾನೆ. ಆದುದರಿಂದ ಮುಸುಕು ಧರಿಸಿದವನಾಗಿ, ಅವನು ಆರಾಧನೆಯಲ್ಲಿ ನಿಲ್ಲುವದರಿಂದ, ಗುರುತರವಾಗಿ ಕ್ರಿಸ್ತನ ಪ್ರಭಾವವನ್ನು ಕಳಕೊಳ್ಳುತ್ತಾನೆ. ಆದುದರಿಂದ ಅವನು ತನಗೆ ತಾನೇ ಅವಮಾನ ಪಡಿಸಿಕೊಳ್ಳುತ್ತನೆ. ನಾವು ಇನ್ನೂ ದಾಸರಾಗದೆ, ಮಕ್ಕಳಾಗಿದ್ದೇವೆ (ಗಲಾತ್ಯ 4:7). "ಕ್ರೈಸ್ತ ರಾದ" ನಾವು ಎಂದು ಟೆರ್‌ಟುಲಿಯನ್ ಹೇಳಿದ ಹಾಗೆ *"ಕೈಗಳನ್ನು ಚಾಚದೆ ಪ್ರಾರ್ಥಿಸುತ್ತೇವೆ, ಅದರಲ್ಲಿ ಯಾವ ಅಪಾಯವಿಲ್ಲ. ಮುಸುಕಿಲ್ಲದೆ ಹೋದರೆ" ಅವಮಾನವಿರುವದಿಲ್ಲ. ಇದನ್ನು ನಮಗೆ ಯಾರೂ ತಿಳಿಸದೆ* ಇದ್ದರೂ, ನಮ್ಮ ಹೃದಯದಿಂದ ಮಾಡುವವರಾಗಿರುತ್ತೇವೆ.

> ... ಪುರುಷನು ದೇವರ ಪ್ರತಿ ರೂಪವೂ ಪ್ರಭಾವವೂ ಆಗಿರುವದರಿಂದ ತಲೆಯನ್ನು ಮುಚ್ಚಿಕೊಳ್ಳಕೂಡದು; ಸ್ತ್ರೀಯಾದರೋ ಪರುಷನ ಪ್ರಭಾವವಾಗಿದ್ದಾಳೆ. ಪುರುಷನು ಸ್ತ್ರೀಯಿಂದ ಉತ್ಪತ್ತಿಯಾದಳು. ಇದಲ್ಲದೆ ಪುರುಷನು ಸ್ತ್ರೀ ನಿಮಿತ್ತವಾಗಿ ನಿರ್ಮಾಣವಾಗ ಅಲ್ಲ; ಸ್ತ್ರೀಯು ಪುರುಷನ ನಿಮಿತ್ತವಾಗಿ ನಿರ್ಮಾಣವಾದಳು. ಹೀಗಿರುವದರಿಂದ ದೂತರ ನಿಮಿತ್ತವಾಗಿ ಸ್ತ್ರೀಯು ಪುರುಷನ ಅಧಿಕಾರ ಸೂಚಿಸುವ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರಬೇಕು (ವಚನಗಳು 11:7-10).

ಇಲ್ಲಿ ಪೌಲನ ಚರ್ಚೆ ಈ ರೀತಿ ಓದುತ್ತದೆ. ನಾನು ನೀಡಿರುವ ನಿಯಮವು ಸಂಕೇತದ ಮೇಲೆ ಅವಲಂಭಿಸಿರುತ್ತದೆ. ಅದು ಸ್ತ್ರೀಯ ಅಧೀನತೆಯ. ಈ ಸಂಕೇತವೇ ಸರಿಯಾದದ್ದು. ಯಾಕೆಂದರೆ ಪುರುಷನು ದೇವರಿಂದ ಬಂದವನು ಮತ್ತು ಅವನು ಚಿಕ್ಕದಾದ ದೇವರ ಪ್ರತಿನಿದಿಯಾಗಿದ್ದಾನೆ. ಮತ್ತು ಸ್ತ್ರೀಯು ಪುರುಷನ ಚಿಕ್ಕ ಪ್ರತಿನಿದಿಯಾಗಿದ್ದಾಳೆ. ಇದರಿಂದ ಇವಳು ಪುರುಷನಿಗಾಗಿ ಉಂಟಾದವಳು ಎಂದು ನಿರೂಪಿಸಲಾಗಿದೆ, ಪುರುಷನು ಸ್ತ್ರೀ ಗಾಗಿ ಉಂಟಾಗಲಿಲ್ಲ. ಆದುದರಿಂದ, ಆರಾಧನೆಯ, ಸ್ಥಳದಲ್ಲಿ ಸ್ತ್ರೀ, ಮುಸುಕು ಇಲ್ಲದೆ ಇರಬಾರದು, ಅದು ಸಂಕೇತವಾಗಿರುವದರಿಂದ ಅವಳು ಅಧೀನಕ್ಕೆ ಒಳಗಾದವಳು ಎಂಬ ಗುರುತು ಸಹ ಆಗಿರುವದರಿಂದ, ಅದನ್ನು ಸೃಷ್ಟಿಯ ನಿಯಮಕ್ಕೆ ನಿರ್ಭಂಧಗೊಳಿಸಲಾಗಿದೆ. ಈ ನ್ಯಾಯವಾದ, ನಿರ್ಭಂಧವನ್ನು ನಿರಾಕರಿಸುವುದು, ಮತ್ತು ಪ್ರತಿಷ್ಟಿತವಾದ ಅಧೀನತ್ವಕ್ಕೆ ಒಳಗಾಗದೇ ಇರುವಂಥ ಕಾರ್ಯವು, ಅಧೀನಕ್ಕೊಳಗಾದ ಮತ್ತು ವಿಧೇಯತೆಯ ಆತ್ಮವನ್ನು ಹೊಂದಿರುವಂಥ ದೇವದೂತರಿಗೆ, ಅಘಾತ ಉಂಟುಮಾಡುತ್ತದೆ (ಯೆಶಾಯ 6:2), ಅವರು,

ಕಣ್ಣಿಗೆ ಕಾಣಿಸದಿದ್ದರೂ, ಅವರು ಆರಾಧನೆಯ ಪ್ರಸನ್ನತೆಯಲ್ಲಿ ಆವರಿಸುವರು (ಮತ್ತಾಯ 18:10; ಕೀರ್ತನೆ 138:1; 1 ಕೊರಿಂಥ 4:9; 1 ತಿಮೊಥೆ 5:21; ಪ್ರಸಂಗಿ 5:6). ಇಲ್ಲಿ ಪೌಲನು ಹಳೇ ಒಡಂಬಡಿಕೆಯ ಸತ್ಯವನ್ನು ಮಾತ್ರ ಎತ್ತಿ ಹಿಡಿಯದೆ, ಇತಿಹಾಸದ ಕ್ರಿಯೆಯನ್ನು ನಿಖರಪಡಿಸಿದನು.

> ಕರ್ತನ ಸಂಬಂಧದಲ್ಲಿ ಪುರುಷರಿಲ್ಲದೆ ಸ್ತ್ರೀಯರೂ ಸ್ತ್ರೀಯರಿಲ್ಲದೆ ಪುರುಷರೂ ಸಂಪೂರ್ಣರಲ್ಲ. ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು; ಹಾಗೆಯೇ ಪುರುಷನು ಸ್ತ್ರೀಮೂಲಕವಾಗಿ ಹುಟ್ಟುತ್ತಾನೆ; ಸಮಸ್ತಕ್ಕೂ ದೇವರೇ ಮೂಲಕಾರಣನು. ನಿಮ್ಮೊಳಗೆ ನೀವೇ ಯೋಚಿಸಿ ತೀರ್ಮಾನಿಸಿಕೊಳ್ಳಿರಿ (ವಚನಗಳು 11:11, 12).

ವಚನ 7ರ ಕುರಿತು ಯಾವ ಮನುಷ್ಯನು, ಹೆಮ್ಮೆ ಪಡಲು ಮುಂದಾಗಬಾರದು ದೇವರು ಪುರುಷನನ್ನು ಸ್ತ್ರೀಗಿಂತ ಮೇಲ್ಮಟ್ಟದಲ್ಲಿ ಇಟ್ಟಿರುವನು ಎಂದು ಹೆಮ್ಮೆ ಪಡದೆ ಇರುವಂತೆ, ಪೌಲನು ಸ್ತ್ರೀ, ಪುರುಷರು ಪರಸ್ಪರ ಅವಲಂಬಿತರು ಎಂಬ ವ್ಯಾಖ್ಯಾನವನ್ನೂ ಇಲ್ಲಿ ಸೇರಿಸಿದ್ದಾನೆ. ಅವರು ಸಮಾನತೆಯಲ್ಲಿದ್ದರೂ, ಸೃಷ್ಟಿಕರ್ತನಾದ, ಆ ದೇವರು, ಎಲ್ಲರಿಗಿಂತಲೂ ಹೆಚ್ಚಾದ ಕೊಂಡಾಟಕ್ಕೆ ಯೋಗ್ಯನಾಗಿದ್ದಾನೆ. ಈ ರೀತಿಯ ಪ್ರಮಾಣದ ಯೋಚನೆಯು, ಸಂಪೂರ್ಣವಾದ ಅಪಾರ್ಥಕ್ಕೆ ಒಳಗಾಗುತ್ತದೆ. ಪುರುಷನು ಮುಸುಕನ್ನು ಧರಿಸದಂತೆ, ಸ್ತ್ರೀಯು ಮುಸುಕನ್ನು ಧರಿಸುವ ವಿಷಯದಲ್ಲಿ, ಪೌಲನು ಇನ್ನೂ ಎರಡು ಸಂಗತಿಗಳನ್ನು ಸೇರಿಸಿದ್ದಾನೆ.

> ನಿಮ್ಮೊಳಗೆ ನೀವೇ ಯೋಚಿಸಿ ತೀರ್ಮಾನಿಸಿಕೊಳ್ಳಿರಿ. ಸ್ತ್ರೀಯು ಮುಸುಕುಹಾಕಿಕೊಳ್ಳದೆ ದೇವರಿಗೆ ಪ್ರರ್ಥನೆಮಾಡುವದು ಯುಕ್ತವೋ? ಪುರುಷನು ಕೂದಲು ಬೆಳಸಿಕೊಂಡರೆ ಅದು ಅವನಿಗೆ ಅವಮಾನಕರವಾಗಿದೆಯೆಂದೂ ಸ್ತ್ರೀಯು ಬೆಳಸಿಕೊಂಡರೆ ಕೂದಲು ಅವಳಿಗೆ ಮುಸುಕಿಗೆ ಬದಲಾಗಿ ಕೊಡಲ್ಪಟ್ಟಿರುವದರಿಂದ ಅದು ಅವಳಿಗೆ ಗೌರವವಾಗಿದೆಯೆಂದೂ ನಿಮಗೆ ಸ್ವಭಾವ ಸಿದ್ಧವಾಗಿ ತಿಳಿಯುತ್ತದಲ್ಲವೋ? (ವಚನಗಳು 11:13-15).

ಪುರುಷನಿಗಿಂತಲೂ, ಸ್ತ್ರೀಯ, ತಲೆಯು ಮುಸುಕಿನಿಂದ ಸರಿಯಾಗಿ ಮುಚ್ಚಲ್ಪಟ್ಟಿರ ಬೇಕು, ಎಂದು ನಮ್ಮ ಸಹಜ ಪ್ರವೃತ್ತಿಯೇ ನಮಗೆ ತಿಳಿಸಬೇಕು, ಯಾಕೆಂದರೆ ಸೃಷ್ಠಿಯೇ ಸಹಜವಾಗಿ ಸಮೃದ್ಧಿಯಾದ ಕೇಶವನ್ನು ನೀಡುತ್ತದೆ. ಪೌಲನ ದಿವಸಗಳಲ್ಲಿ, ನಜೀರ ವೃತದ ಹೊರತಾಗಿ, ಇತರ ಪುರುಷರು, ಸಾಂಘಿಕವಾಗಿ ತಮ್ಮ ಕೂದಲನ್ನು ಒಂದೇ ರೀತಿಯಲ್ಲಿ ಕತ್ತರಿಸಿಕೊಳ್ಳಬೇಕಿತ್ತು. ಉದ್ದವಾಗಿ ಕೂದಲನ್ನು ಬೆಳೆಸುವಂಥಹ ಪುರುಷನು ಕಾಮುಕನು, ಮತ್ತು ಸ್ತ್ರೀ ಭಾವ ಹೊಂದಿರುವವನು ಎಂಬ ಸಂಕೇತವಾಗಿತ್ತು. ಆ ದಿವಸಗಳ ಬರಹಗಾರರು, ಇಂಥವರ ಕುರಿತಾಗಿ ಹೀನೈಸಿ ಬರೆದಿದ್ದರು. ಸ್ವಾಭಾವಿಕವಾಗಿ, ಸೃಷ್ಟಿಯು ಪುರುಷರಿಗಿಂತ ಸ್ತ್ರೀಯರಿಗೆ ಹೆಚ್ಚಾದ ಮುಚ್ಚುವಿಕೆಯನ್ನು ನೀಡಿರುವದರಿಂದ, ಆಕೆಯ ಚಿತ್ರವು ಸ್ವಭಾವದಲ್ಲಿ, ಪುರುಷರಿಗಿಂತ ಭಿನ್ನವಾಗಿರ ಬೇಕು, ಗಂಡಸಿನಂತಿರುವ ಹೆಂಗಸು, ಹೆಂಗಸಿನಂತಿರುವ ಗಂಡಸು, ಆಕ್ಷೇಪಕ್ಕೆ ಅರ್ಹರಾಗಿದ್ದಾರೆ. ಪ್ರತಿಯೊಬ್ಬರು ತಮ್ಮ ಲಿಂಗಕ್ಕೆ ಅನುಗುಣವಾಗಿರಲಿ. ಪರಸ್ಪರರೂ ಪರಸ್ಪರ ವಸ್ತ್ರಗಳನ್ನು ಧರಿಸಿಕೊಂಡು ಸಾರ್ವಜನಿಕವಾಗಿ ತಿರುಗಾಡುವದು ಇನ್ನೂ ಅವಮಾನಕರವಾಗಿರುತ್ತದೆ.

ಪೌಲನು ನಿರ್ಣಯಿಸಿ, "ಒಬ್ಬನು ವಾಗ್ವಾದ ಪ್ರಿಯನಾಗಿ ಕಾಣಿಸಿಕೊಂಡರೆ (ಯಾವ ವ್ಯಕ್ತಿಯಾದರೂ ಎಂಬುದಾಗಿ) ಇಂಥ ಪದ್ಧತಿ ನಮ್ಮಲಿಲ್ಲ, ಮತ್ತು ದೇವರ ಸಭೆಗಳಲ್ಲಿಯೂ ಇಲ್ಲ ಎಂದು ತಿಳುಕೊಳ್ಳಲಿ" (ವಚನ 16). ಗ್ರೀಕರ ವಾಗ್ವಾದದ ಮನೋಭಾವನೆಯನ್ನು ತಿಳಿದು,

ಅವನ ಮೂರು ವಿಧವಾದ ಚರ್ಚೆಯ ಹೊರತಾಗಿಯೂ, ತಮ್ಮ ಮನಸ್ಸಾಕ್ಷಿಯಲ್ಲಿ, ಇನ್ನೂ ವ್ಯತಿರಿಕ್ತತೆಯನ್ನು ತೋರುವದಾದರೆ, ಅಂಥವರಿಗೆ ಪೌಲನು ಈ ನಿರ್ಣಯವನ್ನು ನೀಡಿದನು. ಸಭೆಯು, ಪೌಲನು ನೀಡಿದ ಪದ್ಧತಿಯನ್ನು ಮಾರ್ಗದರ್ಶನವನ್ನೂ ಪ್ರಾರಂಭದಿಂದಲೂ ಅನುಸರಿಸುತ್ತಾ ಬಂದಿತ್ತು. ಮತ್ತು ಇವುಗಳನ್ನು ಮಾಡುತ್ತಾ, ಪ್ರತಿಸ್ಥಾಪಿಸಿತ್ತು, ಪೌಲನಿಗಿಂತಲೂ, ಇತರೆ ಅಪೊಸ್ತಲರು ಇದನ್ನು ನಿಯಮದಂತೆಯೂ, ಪದ್ಧತಿಯಂತೆಯೂ ಸ್ಥಾಪನೆ ಮಾಡಿದ್ದರು, ಈ ವಿಷಯವು ಎಲ್ಲಾ ಸಭೆಗಳಲ್ಲಿ ಒಂದೇ ರೀತಿಯಾಗಿ ಇರಬೇಕೆಂದು ಬೋಧಿಸಿ, ಎಲ್ಲಾ ಸಭೆಗಳವರು ಇದನ್ನೇ ಪಾಲಿಸಬೇಕೆಂದು, ತಿಳಿಸಿದನು. ಬಹಿರಂಗ ಆರಾಧನೆಯಲ್ಲಿ, ಯಾವ ರೀತಿಯಾಗಿ, ಸ್ತ್ರೀ ಪುರುಷರು ಪಾಲು ತೆಗೆದುಕೊಳ್ಳಬೇಕು ಎಂದು ಪೌಲನು ಚರ್ಚಿಸುತ್ತಿದ್ದನು. ನಂತರ ಅವನು ಸ್ತ್ರೀಯು ಈ ವಿಷಯಗಳಲ್ಲಿ, ಪಾಲು ತೆಗೆದುಕೊಳ್ಳಬೇಕೋ ಅಥವಾ ಪಾಲು ತೆಗೆದುಕೊಳ್ಳ ಬಾರದೋ ಎದು ಚರ್ಚಿಸಿದನು (14:34, 35; 1 ತಿಮೊಥೆ 2:12).

ಪೌಲನ ಸಲಹೆಯಂತೆಯೇ, ಈ ದಿನಗಳ ಆರಾಧನೆಯಲ್ಲಿ ಪುರುಷರು ಮುಸುಕನ್ನು ಧರಿಸದೆ ಆರಾಧಿಸುತ್ತಾರೆ, ಆದರೆ ಅದು ಅವನ ಚರ್ಚೆಯಿಂದ ಆಗಿರುವದಿಲ್ಲ. ಅದು ಗೌರವದ ಸಂಕೇತವಾಗಿರುತ್ತದೆ. ಅದು ಯೆಹೂದ್ಯರು ತಮ್ಮ ಪಾದ ರಕ್ಷೆಯನ್ನು ತೆಗೆದ ಹಾಗೆ ಇದರ ನಿಯಮವೇನೆಂದರೆ, ಎಲ್ಲಾ ಯುಗದಲ್ಲೂ, ಎಲ್ಲಾ ಸ್ಥಳಗಳಲ್ಲೂ, ಸ್ತ್ರೀಯರು ಪುರುಷರಿಗೆ ಅಧೀನರಾಗಿರಬೇಕು, ಈ ನಿಯಮವು ಬದಲಾಗಬಾರದು. ಆಕೆಯು ಯವುದೇ ಕಾರಣಕ್ಕೂ ತಾನು ಅಧಿಕಾರ ಹೊಂದಿದವಳೆಂದು ತಿಳಿದು ತಾನು ಹೊಂದದೆ ಇರುವ ಅಧಿಕಾರವನ್ನು ತೋರಬಾರದು.

---

ಟಿಪ್ಪಣಿ

[1]This lesson is a reprint from J. W. McGarvey and Philip Y. Pendleton, *Thessalonians, Corinthians, Galatians, and Romans,* Standard Bible Commentary (Cincinnati, Ohio: Standard Publishing Co., 1916; reprint, Delight, Ark.: Gospel Light Publishing Co., n.d.), 110-13. Adapted and used with permission.

# ಸಭೆಯಲ್ಲಿ ಸ್ತ್ರೀಯ ಪಾತ್ರ

## ಎಡ್ ಸ್ಯಾಂಡರ್ಸ್

ಕಳೆದ ಮೂರು ದಶಕಗಳಿಂದ - ಒಂದು ತಲಾಂತರದಿಂದದೇ ಎಂದು ಹೇಳಬಹುದು - ಸಭೆಯಲ್ಲಿ ಪುರುಷರ ಮತ್ತು ಸ್ತ್ರೀಯರ ಪಾತ್ರಗಳ ಕುರಿತಾಗಿ, ಅವರಿಗೆ ನೀಡಿರುವ ವಿವಿಧ ಪಾತ್ರಗಳಲ್ಲಿ ವ್ಯತ್ಯಾಸಗಳಿವೆಯೇ ಎಂಬ ಪ್ರಶ್ನೆಗಳು ಉದ್ಭವಿಸಿವೆ. ಈ ಹಿಂದೆ ಪುರುಷರಿಗೆ ಮಾತ್ರ ಮೀಸಲಾದ ಪಾತ್ರಗಳನ್ನು, ಸ್ತ್ರೀಯರಿಗೂ ನೀಡಬೇಕು ಎಂಬ ಪ್ರತಿಪಾದನೆ ಕೆಲವು ಧೈರ್ಯವುಳ್ಳ ಸ್ತ್ರೀಯರ ಹೇಳಿಕೆಗಳಾಗಿವೆ. ಪುರುಷರಿಗೆ ಮಾತ್ರ ಅಧಿಕಾರ ಅಥವಾ "ಅಧಿಕಾರ ನಡಿಸುವ ಕಾರ್ಯಲಯವನ್ನು" ನೀಡಲಾಗಿದ್ದು, ಸ್ತ್ರೀಯರಿಗೆ ಆರಾಧನೆಯಲ್ಲೂ ಮತ್ತು ಸಭೆಯಲ್ಲೂ ಕೇವಲವಾದ ಕಾರ್ಯವನ್ನು ನೀಡಿರುವಂಥದ್ದು, ಸ್ತ್ರೀಯರಿಗೆ ಅವಮಾನಕರವಾದದ್ದು ಎಂದು ಪ್ರತಿಪಾದಿಸುತ್ತಾರೆ. ಅವರಿಗೆ ಸಭೆಯಲ್ಲಿ ನಾಯಕತ್ವದ ಸ್ಥಾನವನ್ನು ನೀಡುವ ನಿರ್ದಿಷ್ಟವಾದ ಯೋಜನೆಯನ್ನು ಬಯಸುತ್ತಾರೆ.

### ಆರಿಸಿಕೊಳ್ಳಬೇಕಾದ ನಿರ್ದಿಷ್ಟ ಪ್ರಮಾಣ

ಮಾನವೀಯ ಒಮ್ಮತದ ಅಭಿಪ್ರಾಯಕ್ಕಿಂತಲೂ, ಉತ್ತಮವಾದ ಸಮಾಲೋಚನೆ ಇಲ್ಲದೆ ಇರುವವರಿಗೆ, ಈ ವಿಷಯದ ಕುರಿತ ಸೂಕ್ತ ಉತ್ತರದ ಅವಶ್ಯವಿರುವದಿಲ್ಲ. ಒಂದು ವೇಳೆ ಯಾವ ಪ್ರಶ್ನೆಯನ್ನೂ ಮುಂದಿಡಬಾರದು. ಅವರು ಕೇವಲ ಈ ವಿಷಯಗಳನ್ನು ಇಚ್ಚಿಸುವವರು ಮಾತ್ರವಾಗಿರುತ್ತಾರೆ.

ಯಾವಾಗ ಜನರು, ತಾವಿರುವಂಥ ಪ್ರಮಾಣಕ್ಕೆ ಮಾತ್ರ ಜೀವಿಸುತ್ತಾರೋ, ಅಂಥವರ ಪ್ರಶ್ನೆಗಳಿಗಾಗಿ ಆಗಲಿ, ಅವರಿಗೆ ವಾಕ್ಯದಿಂದ ಉತ್ತರಿಸುವ ವಿಷಯದಲ್ಲಿಯಾಗಲೀ, ದೇವರು ಪ್ರತಿಕ್ರಿಯಿಸುವದಿಲ್ಲ. ಈ ರೀತಿಯಾದ ವಾಗ್ವಾದಗಳಿಂದ, ಸ್ತ್ರೀ ಪುರುಷರು ಮತ್ತು ಸಮಯವು ಸ್ತ್ರೀಯನ್ನು ಪುರುಷರ ಪಾತ್ರಕ್ಕೆ ನಡಿಸುತ್ತದೆ.

ಕಳೆದು ಹದಿನೆಂಟು ಶತಮಾನಗಳಿಂದ, ಅನೇಕ ಧಾರ್ಮಿಕ ಗುಂಪುಗಳು ಸಿದ್ದಾಂಥಗಳ ವಿವಿಧ ಅಂಶಗಳನ್ನು ತಿಳಿಯುವ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ತೋರಿಸಿ - ಸಭೆಯ ಕೆಲಸಗಳಲ್ಲೂ ಆರಾಧನೆಯಲ್ಲೂ, ಸ್ತ್ರೀ ಪುರುಷರ ವಿವಿಧ ಪಾತ್ರಗಳ ಕುರಿತಾಗಿ ಸಾಕಷ್ಟು ಸಂದಾನಗಳನ್ನು ಮಾಡಿಕೊಂಡಿದ್ದಾರೆ. ಯಾಕೆ? ಈ ವಿಷಯಗಳ ಕುರಿತು ದೇವರ ವಾಕ್ಯವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಅಪಾರ್ಥವನ್ನು ಮಾಡಿಕೊಳ್ಳದಂತೆ, ಸ್ಪಷ್ಟತೆಯನ್ನು ಗ್ರಹಿಸಲಾಗಿದೆ.

ಒಬ್ಬ ಸಹೋದರಿ, ಸ್ತ್ರೀಯರ ಕುರಿತಾಗಿ ಬರೆದಿರುವ ಪುಸ್ತಕದಿಂದ ಈ ರೀತಿಯಾಗಿ ಹೇಳಿಕೆಯನ್ನು ನೀಡಿದ್ದಾರೆ. "ಜೀವಶಾಸ್ತ್ರವು ಅಂತಿಮವಲ್ಲ" ಕೆಲವು ಸ್ತ್ರೀಯರು ಅವರಿಗಿರುವಂಥ ಅವಕಾಶ, ಲಾಭ ಕರ್ತವ್ಯ, ಮತ್ತು ದೇವರ ವಾಕ್ಯವು ಅವರಿಗೆ ನೀಡಿರುವಂಥ ಹೊಣೆಗಾರಿಕೆಯಲ್ಲಿ ತೃಪ್ತರಾಗಿರುವದಿಲ್ಲ.

ಧಾರ್ಮಿಕ ಸಂಗತಿಗಳಿಗೆ ಬೈಬಲ್ ಮಾತ್ರ ಅಧಿಕಾರಯುಕ್ತವಾದ ಉತ್ತರವನ್ನು ನೀಡುತ್ತದೆ ಎಂದು ನಂಬುವವರಾದ ನಮಗೆ - ಭೂ ಲೋಕದಲ್ಲಿ ಸಭೆಯನ್ನು ಕಟ್ಟುವಂಥಹ ದೇವರ ಆಲೋಚನೆಯನ್ನು ಗೌರವಿಸುವಂಥವರು - ಸ್ತ್ರೀ ಪುರುಷರಿಗೆ ಅವರ ಪಾತ್ರಗಳನ್ನು ನಿರ್ವಹಿಸುವದರಲ್ಲಿ ಅವರಿಗೆ ನೀಡಿರುವ ಇತಿಮಿತಿಗಳನ್ನು ತಿಳಿದುಕೊಳ್ಳಬೇಕು. ಹೇಗೂ ದೇವರ ಮಾರ್ಗದರ್ಶನವನ್ನು ತಿಳುಕೊಂಡಿರುವವರಲ್ಲಿಯೂ, ಯಥಾರ್ಥ

ವಾದ ವ್ಯತ್ಯಾಸಗಳು ಉಂಟಾಗುತ್ತವೆ. ಯಥೋಚಿತ್ತವಾದ ವಾಕ್ಯಗಳನ್ನು ಅಧ್ಯಾಯನಿಸುವ ಮುಖಾಂತರ ಈ ವ್ಯತ್ಯಾಗಳನ್ನು ಪರಿಹರಿಸಬಹುದು.

## ವಾಕ್ಯಕ್ಕನುಗುಣವಾದ ಮಾರ್ಗದರ್ಶನ

ಸಭೆಯಲ್ಲಿ, ಸೇವೆಮಾಡಲು, ಸ್ತ್ರೀ ಪುರುಷರಿಬ್ಬರಿಗೂ ನೀಡಲಾಗಿರುವ ಇತಿಮಿತಿಗಳ ಕುರಿತು ಕಲಿಯಲು ಮೊದಲ ತಿಮೊಥಿ 2ನೇ ಅಧ್ಯಾಯವು ಪ್ರಾಮುಖ್ಯವಾದ ವೇದ ಭಾಗವಾಗಿರುತ್ತದೆ. ಈ ಹಿನ್ನೆಲೆಯಿಂದ ಪೌಲನು ಎರಡು ಲಿಂಗಗಳಿಗೂ ಸಲಹೆ ಸೂಚನೆಗಳನ್ನೂ ನೀಡಿದ್ದಾನೆ. ಸ್ತ್ರೀ ಪುರುಷರಿಗೆ ಅವನು ತಿಳಿಸಿರುವ ನಿರ್ದಿಷ್ಟ ವಾದ ವಿಷಯಗಳ ಬಗ್ಗೆ ಕೂಲಂಕುಶವಾಗಿ ಧ್ಯಾನ ಮಡೋಣ. ಮತ್ತು ಮೂಲ ಹೊಸ ಒಡಂಬಡಿಕೆಯಲ್ಲಿ ಇರುವ ವಾಕ್ಯಗಳನ್ನು ಸಹ ನೋಡೋಣ, ಅದು ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿದೆ, ಅದು ಯಾವಾಗಲು ಇಂಗ್ಲೀಷ್ ಭಾಷೆಗಿಂತ ಸ್ಪಷ್ಟವಾದ ಭಾಷೆಯಾಗಿರುತ್ತದೆ.

> ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗ ಳನ್ನೂ ಪ್ರಾರ್ಥನೆಗಳನ್ನೂ ಮನವೆಗಳನ್ನೂ ಕೃತಜ್ಞತಾಸ್ತುತಿಗಳನ್ನೂ ಮಾಡ ಬೇಕೆಂದು ಬೋಧಿಸುತ್ತೇನೆ. ನಮಗೆ ಸುಖಸಮಾಧಾನಗಳು ಉಂಟಾಗಿ ನಾವು ಪೂರ್ಣ ಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವಂತೆ ಅರಸುಗಳಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ವಿಜ್ಞಾಪನೆಗಳನ್ನು ಮಾಡಬೇಕು. ಹಾಗೆ ಮಾಡುವದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಅದೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ಆತನ ಚಿತ್ತವಾಗಿದೆ. ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; *ಆತನು ಮನುಷ್ಯ*ನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು. ಆ ಸಾಕ್ಷಿಯನ್ನು ಪ್ರಸಿದ್ಧಿ ಪಡಿಸುವದಕ್ಕಾಗಿಯೇ ನಾನು ಸಾರುವವನಾಗಿಯೂ ಅಪೊಸ್ತಲನಾಗಿಯೂ ನಂಬಿಕೆಯಿಂದಲೂ ಸತ್ಯದಿಂದಲೂ ಅನ್ಯಜನರಿಗೆ ಬೋಧಿಸುವವನಾಗಿಯೂ ನೇಮಿಸಲ್ಪಟ್ಟೆನು. ನಾನು ಇಂಥವನೆಂಬುದು ಸುಳ್ಳಲ್ಲ, ಸತ್ಯವೇ (1 ತಿಮೊಥೆ 2:1-7; ಒತ್ತಿ ಹೇಳಿದ್ದು ನನ್ನದು).

ಇಲ್ಲಿ ಪೌಲನು "ಮನುಷ್ಯ" ಅಥವಾ "ಮನುಷ್ಯರು," ಎಂದು ಈ ಏಳು ವಚನಗ ಳಲ್ಲಿ ನಾಲ್ಕು ಸಾರಿ ಉಪಯೋಗಿಸಿದ್ದಾನೆ. ಇಲ್ಲಿ ಪ್ರತಿಸಲವು ಗ್ರೀಕ್ ಭಾಷೆಯ *ಅಂತ್ರೊಪಾಸ್* ಎಂಬ ಪದವನ್ನು "ಮನುಷ್ಯ" ಎಂಬ ಪದಕ್ಕೆ ಉಪಯೋಗಿಸಲಾಗಿದೆ - ಅಂದರೆ "ಮಾನವನು" ಅಥವಾ "ಮಾನವ," ಇದರಲ್ಲಿ ಸ್ತ್ರೀ ಪುರುಷ ಮಕ್ಕಳೆಲ್ಲರೂ ಒಳಪಟ್ಟಿದ್ದಾರೆ. "ಅಂತ್ರೊಪಾಲಜಿ" ಎಂಬ ಆಂಗ್ಲ ಪದವು (ಮಾನವರ ಅಧ್ಯಾಯನ ಎಂಬ ಅರ್ಥ) ಪೌಲನು ಪ್ರಸಂಗಿಸಿದ ಪದದಿಂದ ಉಪಯೋಗಿಸಲಾಗಿದೆ.

ಪೌಲನು ಹೇಳಿದ್ದೇನೆಂದರೆ,

> ಹೀಗಿರಲಾಗಿ *ಪುರುಷರು* ಎಲ್ಲಾ ಸ್ಥಳಗಳಲ್ಲಿ ಕೋಪವೂ ವಾಗ್ವಾದವೂ ಇಲ್ಲದವರಾಗಿ ಭಕ್ತಿಪೂರ್ವಕವಾಗಿಯೇ ಕೈಗಳನ್ನೆತ್ತಿ ಪ್ರಾರ್ಥಿಸಬೇಕೆಂದು ಆಪೇಕ್ಷಿ ಸುತ್ತೇನೆ. ಹಾಗೆಯೇ *ಸ್ತ್ರೀಯರು* ಮಾನಸ್ಥೆಯರಾಗಿಯೂ ಡಂಭವಿಲ್ಲದವರಾಗಿಯೂ ಇದ್ದು ಮರ್ಯಾದೆಗೆ ತಕ್ಕ ಉಡುಪನ್ನುಟ್ಟು ಕೊಳ್ಳಬೇಕೆಂದು ಅಪೇಕ್ಷಿಸುತ್ತೇನೆ. ಅವರು ಜಡೆ ಚಿನ್ನ ಮುತ್ತು ಬೆಲೆಯುಳ್ಳ ವಸ್ತ್ರ ಮುಂತಾದವುಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳದೆ ದೇವಭಕ್ತೆಯರೆನಿಸಿಕೊಳ್ಳುವ ಸ್ತ್ರೀಯರಿಗೆ ಯುಕ್ತವಾಗಿರುವ ಪ್ರಕಾರ ಸತ್ಕ್ರಿಯೆಗಳಿಂದಲೇ ಅಲಂಕರಿಸಿಕೊಳ್ಳಬೇಕು. *ಸ್ತ್ರೀಯರು* ಮೌನವಾಗಿದ್ದು ಪೂರ್ಣ ವಿಧೇಯರಾಗಿ

ಉಪದೇಶ ವನ್ನು ಕೇಳಬೇಕು. ಉಪದೇಶ ಮಾಡುವದಕ್ಕಾಗಲಿ *ಪುರುಷರ* ಮೇಲೆ ಅಧಿಕಾರ ನಡಿಸುವದಕ್ಕಾಗಲಿ *ಸ್ತ್ರೀಯರಿಗೆ* ನಾನು ಅಪ್ಪಣೆ ಕೊಡುವದಿಲ್ಲ; ಅವರು ಮೌನವಾಗಿರ ಬೇಕು (1 ತಿಮೊಥೆ 2:8-12; ಒತ್ತಿ ಹೇಳಿದ್ದು ನನ್ನದು).

ಪುರುಷರ, ಸ್ತ್ರೀಯರ, ಮತ್ತು ಮಕ್ಕಳ ಕುರಿತಾಗಿ, ಪೌಲನು ಮಾತನಾಡಿ ಮುಗಿಸಿದ ನಂತರ ವಚನ 8ರಲ್ಲಿ ಸ್ತ್ರೀಪುರುಷರು ಗಂಡು ಹೆಣ್ಣಾಗಿ ನಿರ್ವಹಿಸಬೇಕಾದ ಕಾರ್ಯಗಳ ಕುರಿತು ಮೇಲೆ ಮಾತನಾಡುತ್ತಿದ್ದಾನೆ. ಮುಂದವರಿಸಿ ಈ ಅಧ್ಯಾಯದಲ್ಲಿ ಮಾತನಾಡುವವನಾಗಿದ್ದಾನೆ. ಇಲ್ಲಿ ಅವನು "ಮನುಷ್ಯರು" ಅಥವಾ "ಮಾನವ," ಎಂಬ ಗಂಡನಿಗೆ ಸಂಬಂಧ ಪಟ್ಟ ಪದಗಳನ್ನು ಉಪಯೋಗಿಸಿದನು. ಆ ಪದದಲ್ಲಿ ಎರಡು ಪದಗಳು ಅಡಕವಾಗಿವೆ. *ಆನರ್* ಮತ್ತು *ಅಂದ್ರೋಸ್.* ಅದೇ ರೀತಿಯಲ್ಲಿ "ಸ್ತ್ರಿ" ಅಥವಾ "ಸ್ತ್ರೀಯರು" ಎಂಬ ಪದಕ್ಕೆ ಹೆಣ್ಣು ಅಥವಾ ಹೆಂಡತಿ ಎಂದು ಸೂಚಿಸುವ ಗುನೆ ಎಂಬ ಗ್ರೀಕ್ ಪದವನ್ನು ಬಳಸಿದ್ದಾನೆ: *ಗುನೆ* ಎಂಬ ಪದದಿಂದಲೇ ಹೆಣ್ಣನ್ನು ಮತ್ತು ಹೆಂಡತಿಯರನ್ನು ವೈದ್ಯಕೀಯವಾಗಿ ಪರೀಕ್ಷಿಸುವ ವೃದ್ಧರಿಗೆ "ಗೈನೋಕಾಲೇಜಿಸ್ಟ್," ಎಂದು ಕರೆಯುತ್ತೇವೆ.

**ಪುರುಷರಿಗೆ ಬೋಧನೆಗಳು**

ಮಿಶ್ರಿತವಾದ ಗುಂಪಿಗೆ, ಪೌಲನು, ಆರಾಧನೆಯ ವಿಷಯದಲ್ಲಿ ಸಲಹೆ ಸೂಚನೆಗಳನ್ನು ನೀಡಿ, ಪುರುಷರು ಆತ್ಮೀಕವಾದ ಸ್ಥಿತಿಯಿಂದ, ಯೋಗ್ಯವಾದ ರೀತಿಯಲ್ಲಿ ಪ್ರಾರ್ಥಿಸಬೇಕು ಎಂದು ಸೂಚಿಸಿದನು. ಪ್ರಾರ್ಥನೆಗೆ ಅಡ್ಡಿ ಮಾಡುವ ಮನೋಭಾವನೆಯನ್ನು ಬಿಟ್ಟು ಉತ್ತರ ಹೊಂದುವ ಪ್ರಾರ್ಥನೆಯನ್ನು ಮಾಡಬೇಕೆಂದು ತಿಳಿಸಿದನು.

ಪರುಷರು ಪ್ರಾರ್ಥಿಸುವಾಗ
ಪರಿಶುದ್ಧವಾದ ಕೈಗಳನ್ನು ಮೇಲಕ್ಕೆ ಎತ್ತಿ;
ಯೋಗ್ಯವಾಗಿಯೂ, ಮೆಚ್ಚಿಗೆಯಾಗಿಯೂ
ಪ್ರಾರ್ಥಿಸಬೇಕು.

**ಸ್ತ್ರೀಯರಿಗೆ ಬೋಧನೆಗಳು**

ಆರಾಧನೆಯಲ್ಲಿ, ಪುರುಷರು ಯೋಗ್ಯವಾದ ಪಾತ್ರವನ್ನು ಅನುಸರಿಸ ಬೇಕು ಎಂದು ಹೇಳಿದಂತೆಯೇ ಮಿಶ್ರಗುಂಪಿನಲ್ಲಿ ಆರಾಧಿಸುವದಕ್ಕೆ, ಸ್ತ್ರೀಯರಿಗೂ ಮಾರ್ಗದರ್ಶನವನ್ನು ನೀಡಲಾಗಿದೆ.

ಸ್ತ್ರೀಯರು ಮಾನಸ್ಥೆಯರಾಗಿಯೂ, ಡಂಬವಿಲ್ಲದವರಾಗಿಯೂ
ಮರ್ಯಾದೆಗೆ ತಕ್ಕ ಉಡುಪನ್ನು ಉಟ್ಟುಕೊಳ್ಳಬೇಕು;
ಅವರು ಜಡೆ, ಚಿನ್ನ ಮುತ್ತು ಬೆಲೆಯುಳ್ಳ ವಸ್ತ್ರ ಮುಂತಾದವುಗಳಿಂದ ತಮ್ಮನ್ನು
ಅಲಂಕರಿಸಿಕೊಳ್ಳದೆ,
ದೇವ ಭಕ್ತಯರಿನಿಸುಕೊಳ್ಳುವ ಸ್ತ್ರೀಯರಿಗೆ ಯುಕ್ತವಾಗಿರುವ ಪ್ರಕಾರ ಸತ್ಕ್ರಿಯೆಗಳಿಂದ
ಅಲಂಕರಿಸಿ ಕೊಳ್ಳಬೇಕು.
ಸ್ತ್ರೀಯರು ಮೌನವಾಗಿದ್ದು ಪೂರ್ಣ ವಿಧೇಯರಾಗಿ ಉಪದೇಶವನ್ನು ಕೇಳಬೇಕು.
ಉಪದೇಶ ಮಾಡುವದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡಿಸುವುದಾಗಲಿ
ಮಾಡಬಾರದು.

# ದೇವ ವಾಕ್ಯದ ಮಾರ್ಗದರ್ಶನಕ್ಕೆ ಉಂಟಾಗುವ ಪ್ರತಿಕ್ರಿಯೆಗಳು

ಈ ಬೋಧನೆಯ ನಿಮಿತ್ತ ಕೆಲವು ಕಠಿಣಕರವಾದ ಪ್ರತಿಕ್ರಿಯೆಗಳು ಪೌಲನ ಬಗ್ಗೆಯೂ - ಹಾಗೂ ದೇವರ ಬಗ್ಗೆಯೂ ಉಂಟಾಗಿವೆ.

1. ಕೆಲವರ ಅಭಿಪ್ರಾಯವೇನೆಂದರೆ ಪೌಲನನ್ನು ಅಕ್ಷರಶಃವಾಗಿ ಅರ್ಥೈಸಿಕೊಳ್ಳ ಬಾರದು. ಕ್ರೈಸ್ತ ಸಭೆಯಲ್ಲಿ ಪುರುಷರು ಮಾತ್ರ ವ್ಯತ್ಯಾಸವಾದ ಪಾತ್ರವನ್ನು ಅನುಸರಿಸ ಬೇಕು - ಅದು ಅವಶ್ಯವುಳ್ಳದ್ದು ಎಂದು ಹೇಳಿದ ಹೇಳಿಕೆಯನ್ನು ಮತ್ತು ಸ್ತ್ರೀಯರು ಆ ಪಾತ್ರವನ್ನು ವಹಿಸಬಾರದು ಎಂಬ ಹೇಳಿಕೆಯು ಯಾವ ರೀತಿಯಲ್ಲಿ ಸಾಂಕೇತಿಕ ವ್ಯಾಖ್ಯಾನವಾಗುತ್ತದೆ?

2. ಕೆಲವರು ಇದು ಸಂಸ್ಕೃತಿಗೆ ಅನುಗುಣವಾದ ಸಲಹೆಗಳು ಮಾತ್ರ ಎಂದು ಹೇಳು ತ್ತಾರೆ. ಆದರೆ ಪೌಲನು ಸಂಸ್ಕೃತಿಗೆ ಅನುಗುಣವಾದ ಸಲಹೆಗಳನ್ನು ನೀಡಿರುವದಿಲ್ಲ. ವಿವಿಧ ಅಂಗಗಳ ಅನುಗುಣವಾಗಿ, ಮತ್ತು ಸೃಷ್ಟಿಯ ಅನುಗುಣವಾಗಿ, ನೇರವಾದ ಅಪ್ಪಣೆಗಳನ್ನು ನೀಡಿದನು, ಮೊದಲನೆಯ ಸ್ತ್ರೀಯು ನಾಯಕಿಯ ಪಾತ್ರವನ್ನು ವಹಿಸಿದ್ದರಿಂದ, ಪಾಪವು ಈ ಲೋಕಕ್ಕೆ ಪ್ರವೇಶವಾಯಿತು ಎಂದು ತಿಳಿಸುತ್ತಿದ್ದಾನೆ. ದೇವರ ಸ್ವಭಾವ ಸಿದ್ಧವಾದ, ಸ್ತ್ರೀ ಸ್ವಭಾವವನ್ನು ಹೊಂದಿರುವ, ಸ್ತ್ರೀ ಅಧಿಕಾರ ನೀಡಲು ಸಾಧ್ಯವೆ, ಅವಳ ಈ ಪಾತ್ರದಿಂದ ರಕ್ಷಣೆಯು ಲಭ್ಯವೇ, ಈ ವಿಷಯವು ಸಂಸ್ಕೃತಿಯಲ್ಲಿ ಸಂಬಂಧಿಸಿರುವುದು ಎಂದು ಕೇಳಿ ಸುತ್ತದೆಯೇ?

3. ಇನ್ನೂ ಕೆಲವರ ಅಭಿಪ್ರಾಯವೇನೆಂದರೆ, ಪೌಲನು, ಯೆಹೂದ್ಯರ "ರಬ್ಬಿ"ಯ ಸಲಹೆಗಳನ್ನು ಮಾತ್ರ ನೀಡಿದನು ಎಂದು ಹೇಳುತ್ತಾರೆ. ಪೌಲನು ದೇವರಿಂದ ಪ್ರೇರಿತ ನಾಗಿದ್ದನು (1 ಕೊರಿಂಥ 14:37), ಪೇತ್ರನು ಈ ಅಧಿಕಾರವನ್ನು ಅನುಮೋದಿ ಸಿದನು (2 ಪೇತ್ರ 3:15-17). ಅವನ ಬೋಧನೆಗಳು ಇತರರಿಂದ ಪಡೆದವುಗಳಲ್ಲ ಮತ್ತು ಅವುಗಳು ಇತರರ ಆಲೋಚನೆಗಳೂ ಆಗಿರುವದಿಲ್ಲ.

4. ಪೌಲನಲ್ಲಿ ಸ್ತ್ರೀಯರ ಸೌಂದರ್ಯದ ಅವರ ಮೇಲೆ ಹಾಗೂ ವಯಕ್ತಿಕ ವಾದ ದ್ವೇಷ ಭಾವನೆ ಇದ್ದದ್ದರಿಂದ, ಅವನ ಬೋಧನೆಗಳು ಈ ರೀತಿಯಾಗಿ ಪ್ರತಿಬಿಂಬಿಸಿದವು ಎಂಬುದು ಇನ್ನೂ ಕೆಲವರ ಅಭಿಪ್ರಾಯ. ಹೌದು, ಅವನು ಫರಿಸಾಯನಾಗಿದ್ದರಿಂದ, ದಿನಕ್ಕೆ ಮೂರಾ ವರ್ತಿ ಪ್ರಾರ್ಥಿಸಿದನು, ಅವನು ಅನ್ಯನಾಗದೆ ಇರುವದಕ್ಕಾಗಿ, ಗುಲಾಮನಾಗದೆಯೂ, ಸ್ತ್ರೀಯಾಗಿ ಇರದೆ ಇರುವದಕ್ಕಾಗಿಯೂ, ದೇವರಿಗೆ ಸ್ತೋತ್ರ ಮಾಡಿದನು. ಹೇಗೂ, ಇದೇ ಮನುಷ್ಯನು ತಾನು ತನ್ನನ್ನು ದೇವರಿಗೆ ಒಪ್ಪಿಸಿಕೊಟ್ಟ ನಂತರ ಹೇಳಿದ್ದೇನೆಂದರೆ, "ನೀವೆ ಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನೂ ಗ್ರೀಕನೂ ಎಂದೂ ಆಳು ಒಡೆಯ ಎಂದು, ಗಂಡು ಹೆಣ್ಣು ಎಂದೂ ಬೇಧವಿಲ್ಲ" (ಗಲಾತ್ಯ 3:28). ಪೌಲನು ಮಾನವನ ಜೀವಿತದ ಬೆಲೆಯನ್ನು ತಿಳಿದುಕೊಂಡನು, ಮಾನವನು ಎಲ್ಲದಕ್ಕಿಂತಲೂ ಬೆಲೆಯುಳ್ಳವನು ಎಂದು ಸ್ಪಷ್ಟಪಡಿಸಿದನು.

5. ಸಂದೇಹಾಸ್ಪದ ವಾಕ್ಯಗಳನ್ನು ಪೌಲನು ಬೋಧಿಸಿದನು ಎಂದು ಕೆಲವರ ಅಭಿಪ್ರಾಯ. ದೇವರ ಪ್ರವಾದಿಗಳ ಮತ್ತು ಬೋಧಕರ ಬಾಯಿಂದ ಹೊರಟ ಪ್ರೇರಣೆಯ ಮಾತುಗಳನ್ನು ಪೌಲನು ಸ್ಪಷ್ಟಪಡಿಸಿದನು! ಅವನು ಆದಿಕಾಂಡದ ಸೃಷ್ಟಿಯ ನಿಯಮವನ್ನು, ಮತ್ತು ಮಾನವನ ಚರಿತ್ರೆಯನ್ನು ಪುನರುಚ್ಚರಿಸಿದನು. ಆದಿಕಾಂಡವು ಮಾನವನ ಕ್ಲಿಷ್ಟಕರ ವಾದ ಆರಂಭದ ಸತ್ಯವನ್ನು ವಿವರಿಸುತ್ತದೆ.

6. ಕೊನೆಯದಾಗಿ, ಈ ಅಂಗಗಳ ಕುರಿತಾದ ಯಾವುದೇ ವ್ಯಾಖ್ಯಾನವನ್ನು ಪೌಲನು ಮಾಡಲೇ ಇಲ್ಲ ಎಂಬುದಾಗಿ ಇನ್ನೂ ಕೆಲವರ ಅಭಿಪ್ರಾಯವಾಗಿದೆ. ನಾವು ಅಧ್ಯಾಯನಿಸುವ ವಾಕ್ಯಗಳು ಪೌಲನಿಂದ ಬರೆಯಲ್ಪಡಲಿಲ್ಲ, ಎಂದು ಅವರು ಹೇಳು ತ್ತಾರೆ. ಒಂದು ವೇಳೆ ಈ ಹೇಳಿಕೆಗಳು ಸುಳ್ಳಾಗಿದ್ದರೆ, ನಾವು ಆರಾಧನೆಯನ್ನೇ ಮಾಡಬಾರದು!

ದೇವರ ವಾಕ್ಯದಲ್ಲಿ ನಾವು ಭರವಸೆ ಇಡದೇ ಹೋದರೆ, ನಾವು ಚುಕ್ಕಾಣಿ ಇಲ್ಲದ ಹಡಗಿನಂತೆ ಮಿತಿ ಇಲ್ಲದ ಸಮುದ್ರದಲ್ಲಿ ತೇಲಿ ಮುಳುಗಿ ಹೋಗುತ್ತೇವೆ. ಯಾವ ಅಪೊಸ್ತಲರು ಸಭೆಯ ಕುರಿತು ಬರೆದರೋ - ಅದನ್ನು ಕ್ರಿಸ್ತನ ದೇಹ ವೆಂದು ವಿವರಿಸಿದರೋ, ಸಂಪೂರ್ಣವಾಗಿ ಪ್ರಪಂಚದಿಂದ ರಕ್ಷಿಸಲ್ಪಟ್ಟವರೂ ಮತ್ತು ಮನುಷ್ಯರ ರಕ್ಷಣೆಗೆ ಕ್ರಿಸ್ತನೇ ಸಾಧನ ಎಂದರೋ ಸಭೆಯ ಒಟ್ಟಾಗಿ ಕೂಡಿಬರೋಣದ ಬಗ್ಗೆಯೂ ತಿಳಿಸಿದರು. ಅದರ ನಾಯಕತ್ವದ ಕುರಿತು, ನಡವಳಿಕೆಯ ಕುರಿತು, ಲಿಂಗಗಳ ಸಂಬಂಧದ ಕುರಿತು, ಅವನು ಪ್ರೇರಿತವಾದ ಮಾರ್ಗದರ್ಶನವನ್ನು ನೀಡಿರುವನು.

ದೇವರು ಪುರುಷನನ್ನು ಮಾಡುವದಕ್ಕೆ ಅನುಮತಿಕೊಟ್ಟ ಕಾರ್ಯಗಳು ಸ್ತ್ರೀಯರನ್ನು ಮಾಡಬಾರದೆಂದು ನಿಷೇಧಿಸುವುದು ಅಧರ್ಮ ಎಂದು ಒಬ್ಬ ಸಹೋದರಿ ಹೇಳಿದಳು. ಅದಕ್ಕೆ ನಾನು ಆ ಸ್ತ್ರೀಯನ್ನು ಹೀಗೆ ಕೇಳಿದನು, "ಒಬ್ಬ *ಅವಿವಾಹಿತನನ್ನು* ಸಭಾಧ್ಯಕ್ಷನಾಗಿ ಮತ್ತು ಸಭಾ ಸೇವಕನಾಗಿ ಸೇವೆ ಸಲ್ಲಿಸಬಾರದೆಂದು ದೇವರು ಹೇಳಿದ್ದು ಅಧರ್ಮವೋ?"

## ವಾಕ್ಯದ ಮಾರ್ಗದರ್ಶನದ ನಂತರದ ಯುಕ್ತಿ ಪೂರ್ವಕವಾದ ವಿವರಣೆ

ಪೌಲನು ಸಲಹೆಗಳು, ಅಧಿಕಾರವಿಲ್ಲದ ಅಂಶಗಳಿಂದ ಕೂಡರಲಿಲ್ಲ. ತನ್ನ ಬೋಧ ನೆಗಳಿಗೆ ಸರಿಯಾದ ಕಾರಣಗಳನ್ನು ನೀಡಿದ್ದಾನೆ:

> ಮೊದಲು ನಿರ್ಮಿತನಾದವನು ಆದಾಮನಲ್ಲವೇ, ಆ ಮೇಲೆ ಹವ್ವಳು; ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ, *ಸ್ತ್ರೀಯು* ವಂಚನೆಗೆ ಒಳಬಿದ್ದು ಅಪರಾಧಿಯಾದಳು. ಆದರೂ *ಸ್ತ್ರೀಯರು* ಮಾನಸ್ಥೆಯರಾಗಿ ನಂಬಿಕೆಯಲ್ಲಿಯೂ ಪ್ರೀತಿಯಲ್ಲಿಯೂ ಪರಿಶುದ್ಧ ತೆಯಲ್ಲಿಯೂ ನೆಲೆಗೊಂಡಿದ್ದರೆ ಮಕ್ಕಳನ್ನು ಹೆರುವದರಲ್ಲಿ ರಕ್ಷಣೆಹೊಂದುವರು (1 ತಿಮೊಥೆ 2:13-15; ಒತ್ತಿ ಹೇಳಿದ್ದು ನನ್ನದು).

ಪುಲ್ಲಿಂಗವಾದ ಮನುಷ್ಯನು (ಗಂಡು) ಸಾರ್ವಜನಿಕ ಆರಾಧನೆಯಲ್ಲಿ ನಾಯಕತ್ವವನ್ನು ವಹಿಸಬೇಕು. ಯಾಕೆಂದರೆ (1) ಇದು ಪ್ರೇರಿತವಾದ ಪೌಲನ ನೇರ ಅಪ್ಪಣೆಯಾಗಿರುತ್ತದೆ, (2) ಇದು ಸೃಷ್ಟಿಯ ನಿಯಮವಾಗಿರುತ್ತದೆ, (3) ಸ್ತ್ರೀಯು, ಏದೆನ್ ತೋಟದಲ್ಲಿ, ನಾಯಕತ್ವವನ್ನು ವಹಿಸಿದ್ದರ ನಿಮಿತ್ತ ಉಂಟಾದ ಅನಾಹುತದ ಕಾರಣದಿಂದ ಮತ್ತು (4) ಹೆಣ್ಣಿನ ಅಧಿಕಾರವು ಅವಶ್ಯವಿಲ್ಲದೆ ಇರುವದರಿಂದ.

ಸ್ತ್ರೀಯು, ಪುರುಷನ ಮೇಲೆ ಅಧಿಕಾರ ಚಲಾಯಿಸುವ, ಕುರಿತಾದ ಪೌಲನ ಎಲ್ಲಾ ಬೋಧನೆಗಳಿಗೆ, ಈ ಸಲಹೆಗಳು ಅನ್ವಹಿಸುತ್ತವೆ. *ಸ್ತ್ರೀಯರು ಪ್ರತ್ಯೇಕವಾದ* ಸನ್ನಿವೇಶದಲ್ಲಿ ಮಾತ್ರ *ಬೋಧಿಸಬೇಕು*, ಅವರು ಪ್ರಸಂಗಿಸಬಾರದು. ಯಾಕೆಂದರೆ ಪ್ರಸಂಗದಲ್ಲಿ, ಅಧಿಕಾರವು ಪ್ರಾಯೋಜಿಸಲ್ಪಡುತ್ತದೆ 1 ತಿಮೊಥೆ 2:11, 12 ರಿಂದ ತೀತ 2:15:

> ಸ್ತ್ರೀಯರು ಮೌನ ವಾಗಿದ್ದು ಪೂರ್ಣ ವಿಧೇಯರಾಗಿ ಉಪದೇಶವನ್ನು ಕೇಳಬೇಕು. ಉಪದೇಶ ಮಾಡುವದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡಿಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವದಿಲ್ಲ; ಅವರು ಮೌನವಾಗಿರಬೇಕು (1 ತಿಮೊಥೆ 2:11, 12).
>
> ಈ ಕಾರ್ಯಗಳ ವಿಷಯದಲ್ಲಿ ಬೋಧಿಸುತ್ತಾ ಎಚ್ಚರಿಸುತ್ತಾ ಪೂರ್ಣ ಅಧಿಕಾರದಿಂದ ಖಂಡಿಸುತ್ತಾ ಇರು. ಯಾರೂ ನಿನ್ನನ್ನು ತಿರಸ್ಕರಿಸದ ಹಾಗೆ ನೋಡಿಕೋ (ತೀತ 2:15).

ಮೂಲ ಭಾಷೆಯಲ್ಲಿ, ಪೌಲನ ಹೇಳಿಕೆಯು "ಸಂಪೂರ್ಣ ಅಧೀನತೆಯಿಂದ" (1 ತಿಮೊಥೆ

2:11)ರಲ್ಲಿ *ಹೂಪಾಟೇಜ್* ಎಂಬುದರ ಅರ್ಥ "ಅಧಿಕಾರಕ್ಕೆ ಒಳಪಡು"[1] ತೀತನು "ಎಲ್ಲಾ ಅಧಿಕಾರದಿಂದ" ಬೋಧಿಸಬೇಕೆಂದು ಪೌಲನು ತಿಳಿಸಿದನು. ಮತ್ತು *ಎಪಾಟೇಜ್* ಎಂದರೆ "ಮೇಲಾದ ಅಧಿಕಾರ" ಇದರ ಅರ್ಥದಲ್ಲಿ, ಸ್ತ್ರೀಯು ಈ *ಅಧಿಕಾರಕ್ಕೆ ಒಳಗಾಗಬೇಕು,* ಪ್ರಸಂಗಿಯು *ಮೇಲಾದ ಅಧಿಕಾರದಿಂದ* ಕರ್ತವ್ಯವನ್ನು ನಿರ್ವಹಿಸಬೇಕಿತ್ತು. ಇದರಲ್ಲಿರುವ ಭಿನ್ನಾಭಿಪ್ರಾಯವನ್ನು ತಪ್ಪಿಸಿಕೊಳ್ಳಲು ಅಸಾಧ್ಯ ಸ್ತ್ರೀಯರು ಸಭೆಯನ್ನು ಉದ್ದೇಶಿಸಿ, *ಅಧಿಕಾರದಿಂದ* ಮಾತನಾಡಕೂಡದು.

## ವಾಕ್ಯದ ಮಾರ್ಗದರ್ಶನವನ್ನು ಗೌರವಿಸಬೇಕು

ಸಭೆಯಲ್ಲಿ, ಸ್ತ್ರೀಯರು ನಿರ್ವಹಿಸಬೇಕಾದ, ವಿವಿಧವಾದ ಪಾತ್ರಗಳ ಕುರಿತಾಗಿ, ಬೈಬಲ್ ಅನೇಕ ವಿಷಯಗಳನ್ನು ನೀಡುತ್ತದೆ. ಈ ಕೆಳಗಿನ ಅಂಶದಲ್ಲಿ ಸ್ತ್ರೀಲಿಂಗವು, ಪುಲ್ಲಿಂಗಕ್ಕೆ ಅಧೀನವಾಗಿರತಕ್ಕದ್ದು ಎಂದು ತಿಳಿಸುತ್ತದೆ: (1) ಅದು ದೈವೀಕ ಸೃಷ್ಟಿಯ ಕ್ರಮ ವಾಗಿದೆ (ಆದಿಕಾಂಡ 2:7, 18-23; 1 ಕೊರಿಂಥ 11:3); (2) ದೈವೀಕ ನಿಯಮವಾಗಿರುತ್ತದೆ (ಆದಿಕಾಂಡ 3:16; 1 ಕೊರಿಂಥ 14:34); (3) ಅದು ಅಪೊಸ್ತಲರ ನಿರ್ದಿಷ್ಟವಾದ ಅಪ್ಪಣೆ (ಕೊಲಸ್ಸೆ 3:18; 1 ತಿಮೊಥೆ 2:8-15); (4) ಅದು ಅನುಮತಿಸಿದ ಮಾದರಿಯಾಗಿರುತ್ತದೆ (1 ಪೇತ್ರ 3:5); ಮತ್ತು (5) ಅವು ದೈಹೀಕವಾದ, ಮತ್ತು ಭಾವನಾತ್ಮಕವಾದ ನಿಬಂಧನೆಗಳಾ ಗಿರುತ್ತವೆ (1 ಪೇತ್ರ 3:7).

ಸ್ತ್ರೀಯು, ಅಧೀನಕ್ಕೊಳಪಡುವ ಪಾತ್ರವನ್ನು ಗ್ರಹಿಸುವದರಿಂದ, ಅವಳು ಕೀಳುಮಟ್ಟಕ್ಕೆ ಇರುವಳು ಎಂದು ತಿಳಿಯಬಾರದು. *ಅದು ಅವಳನ್ನು ದೇವರ ವಿಧೇಯ ತೆಗೆ ನಡೆಸುತ್ತದೆ!* ಇದನ್ನು ಒಪ್ಪಿಕೊಳ್ಳದೆ ಇರುವಂಥ ಸ್ವಭಾವವು ಆಕೆಯನ್ನು ವಿರೋಧಿ ಸುವವಳು ಎಂದು ತಿಳಿಸುತ್ತದೆ, *ಅದು ಪಾಪವಾಗುತ್ತದೆ*!

ಸ್ತ್ರೀ ಮತ್ತು ಪುರುಷರ ಸಂಬಂಧದ ಕುರಿತಾಗಿ 1 ಕೊರಿಂಥ 11:3-9ರವರೆಗೆ ಸರಳವಾಗಿ ತಿಳಿಸಲಾಗಿದೆ:

ಪುರುಷನು, ಸ್ತ್ರೀಗೆ *ತಲೆ*ಯಾಗಿದ್ದಾನೆ, ಕ್ರಿಸ್ತನು ಪುರುಷನಿಗೆ, ತಲೆಯಾಗಿದ್ದಾನೆ, ದೇವರು ಕ್ರಿಸ್ತನಿಗೆ ತಲೆಯಾಗಿದ್ದಾನೆ. ತಲೆಯು ಎಲ್ಲಾ ಅಧಿಕಾರವನ್ನು ಹೊಂದಿರುವದಿಲ್ಲ ಎಂದು ತಿಳಿಯುವುದಾದರೆ ಯಾವುದೇ ನೋವು ಅಥವಾ ಅವಮಾನವು ಉಂಟಾಗುವದಿಲ್ಲ. *ತಲೆಯು ಕೇವಲ ನಾಯಕ, ಮಾರ್ಗದರ್ಶಕ, ಮತ್ತು ಆಡಳಿತ ಮಾಡುತ್ತದಷ್ಟೇ.*

ಸ್ತ್ರೀಯು, ಪುರುಷನಿಗೆ *ಅಡಿಯಾಳಾಗಿದ್ದಾಳೆ.* ಅಂದರೆ ಅದು ಕೀಳು ಮಟ್ಟದ ಸ್ಥಾನ ಎಂಬುದಾಗಿ ಇರುವದಿಲ್ಲ, ಅಡಿಯಳಾಗಿರುವುದು ಅಂದರೆ, *ಸಹಾಯಕಳು* ಎಂಬುದಾಗಿ, ಮತ್ತು ಇನ್ನೊಬ್ಬರ ಅಧಿಕಾರದ ವ್ಯಾಪ್ತಿಯಲ್ಲಿ ಇರುವುದು, ಅವರು ಇನ್ನೊಬ್ಬರ *ಅಧಿಕಾರದ* ವ್ಯಾಪ್ತಿಯಲ್ಲಿರುವದು ಎಂಬುದಾಗಿ, ವ್ಯತ್ಯಾಸವು ಅದರ ಕ್ರಯದಲ್ಲಿರುವುದಿಲ್ಲ, ಅದರ *ಕಾರ್ಯದಲ್ಲಿರುತ್ತದೆ*!

ನ್ಯಾಯವಾಗಿ ವಾದಿಸೋಣ. ಸ್ತ್ರೀಯನ್ನು ಪೌಲನು ಅಡಿಗೆಮನೆಗೆ ಕಟ್ಟಿಹಾಕಿದನೇ ಅವಳನ್ನು ಧೋಬಿಯ ಅಂಗಡಿಯಲ್ಲಿ ಕೂಡಿಹಾಕಿದನೇ, ಆಕೆಯನ್ನು ಮಲಗುವ ಕೋಣೆ ಯಲ್ಲಿ ಕೂಡಿಹಾಕಿದನೆ, ಅಥವಾ ಅವಳನ್ನು ಶಿಶುವಿಹಾರದಲ್ಲಿ ಜಡಿದಿದ್ದನೇ? ಈ ಯಾವುದೇ ಅಂಶಗಳನ್ನು ಪೌಲನು ಪ್ರಸ್ತಾಪಿಸಿರುವದಿಲ್ಲ. ಯಾಕೆಂದರೆ ಅವನು ಸ್ತ್ರೀಯರನ್ನು ಸನ್ಮಾನಿಸಿದ್ದನು, ಮತ್ತು ಕ್ರಿಸ್ತನ ದೇಹಕ್ಕಾಗಿ, ಹವ್ವಳ ಹೆಣ್ಣು ಮಕ್ಕಳು ನೀಡಿದ ಸೇವೆಯನ್ನು ಮೆಚ್ಚಿಕೊಂಡಿದ್ದನು. ಪೌಲನೊಬ್ಬನೆ ಈ ವಿಷಯದ ಕುರಿತು ಪ್ರಸ್ತಾಪಿಸಲಿಲ್ಲ. ಪೌಲನಾಗಲೀ ಅಥವಾ ಇತರೆ ದೈವ ಶಾಸ್ತ್ರದ ಬರಹಗಾರರಾಗಲೀ, ಸ್ತ್ರೀಯರು ಅಧಿಕಾರಕ್ಕೆ ಒಳ ಪಡುವ ಕುರಿತು ಮತ್ತು *ಸ್ತ್ರೀಯರ, ಪುರುಷರ ಮತ್ತು ದೇವರ ಸಂಬಂಧವಾದ ವಿಷಯಗಳಲ್ಲಿ ಭಿನ್ನಾಭಿಪ್ರಾವನ್ನು ತೋರಿಸಲಿಲ್ಲ:*

ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು;
ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು;

*ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು* (ಆದಿಕಾಂಡ 1:27; ಒತ್ತಿ ಹೇಳಿದ್ದು ನನ್ನದು).

... ಈಗ ಸರಿ; ಈಕೆಯು ನನ್ನ ಎಲುಬುಗಳಿಂದ
  ಬಂದ ಎಲುಬೂ
ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ;
ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರೀ
  ಎನ್ನಿಸಿಕೊಳ್ಳುವಳು ಅಂದನು (ಆದಿಕಾಂಡ 2:23).

ಹೀಗಿರುವಲ್ಲಿ ಅವರು *ಇನ್ನು ಇಬ್ಬರಲ್ಲ, ಒಂದೇ ಶರೀರವಾಗಿದ್ದಾರೆ ...* (ಮತ್ತಾಯ 19:6; ಒತ್ತಿ ಹೇಳಿದ್ದು ನನ್ನದು).

... ನಮ್ಮ ಸಹೋದರಿಯಾದ ಫೊಯಿಬೆಯನ್ನು ಪ್ರೀತಿಯಿಂದ ಅಂಗೀಕರಿಸಿರಿ. ಆಕೆಯು ಕೆಂಕ್ರೆಯ ಪಟ್ಟಣದಲ್ಲಿರುವ ಸಭೆಯ ಸೇವಕಳಾಗಿದ್ದಾಳೆ; ... ಆಕೆಯು ನನಗೂ ಅನೇಕರಿಗೂ ಸಹಾಯಮಾಡಿದವಳು (ರೋಮಾಪುರ 16:1, 2).

ಆದರೂ ಕರ್ತನ ಸಂಬಂಧದಲ್ಲಿ ಪುರುಷರಿಲ್ಲದೆ ಸ್ತ್ರೀಯರೂ ಸ್ತ್ರೀಯರಿಲ್ಲದೆ ಪುರುಷರೂ ಸಂಪೂರ್ಣರಲ್ಲ (1 ಕೊರಿಂಥ 11:11).

ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ (ಗಲಾತ್ಯ 3:28).

... ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ತನ್ನ ಹೆಂಡತಿಯರನ್ನು ಪ್ರೀತಿಸುವವನು ತನ್ನನ್ನೇ ಪ್ರೀತಿಸಿಕೊಳ್ಳುವವನಾಗಿದ್ದಾನೆ (ಎಫೆಸ 5:28).

ನಿನ್ನಲ್ಲಿರುವ ಸಿಷ್ಕಪಟವಾದ ನಂಬಿಕೆಯು ನನ್ನ ನೆನಪಿಗೆ ಬಂತು. ಆ ನಂಬಿಕೆಯು ನಿನ್ನ ಅಜ್ಜಿಯಾದ ಲೋವಿಯಲ್ಲಿಯೂ ನಿನ್ನ ತಾಯಿಯಾದ ಯೂನೀಕೆಯಲ್ಲಿಯೂ ವಾಸವಾಗಿತ್ತು; ಹಾಗೆಯೇ ನಿನ್ನಲ್ಲಿಯೂ ವಾಸವಾಗಿದೆ ಎಂದು ದೃಢವಾಗಿ ನಂಬಿದ್ದೇನೆ (2 ತಿಮೊಥೆ 1:5).

ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬದನ್ನು ಜ್ಞಾಪಕಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗತನಮಾಡಿರಿ. ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ. ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವದಿಲ್ಲ (1 ಪೇತ್ರನು 3:7).

## ಮುಕ್ತಾಯ

ದೇವರ ವಾಕ್ಯದ ಸ್ತ್ರೀ ಯಾವಾಗಲೂ ಪುರುಷನ ಅಧಿಕಾರಕ್ಕೆ ಒಳಪಟ್ಟಿರುತ್ತಾಳೆ. (ನಾಯಕತ್ವಕ್ಕೆ) (1 ತಿಮೊಥೆ 2:8-15; 1 ಕೊರಿಂಥ 11:12). ಇದು ಕ್ರಯಕ್ಕಿಂತಲೂ

*ಕಾರ್ಯವಾಗಿರುತ್ತದೆ.* ಆಕೆಯ ಅಧೀನತ್ವವು ಯಾವುದೇ ವಿಧವಾಗಿ ಆಕೆಯ ಕ್ರೈಸ್ತತ್ವಕ್ಕೆ ತೊಡಕಾಗಬಾರದು. ಪುರುಷನಿಗೆ ಕುಟುಂಬದ ಹಾಗೂ ಸಭೆಯ ನಾಯಕತ್ವವನ್ನು ವಹಿಸಲಾಗಿದೆ. ಸ್ತ್ರೀಗೆ ಅಧಿಕಾರ ನಡೆಸುವುದು ಯಾವ ರೀತಿಯಲ್ಲಿ ಪಾಪವಾಗಿರುತ್ತದೋ, ಅದೇ ರೀತಿಯಲ್ಲಿ ಪುರುಷನು ತನಗೆ ನೀಡಿರುವ ನಾಯಕತ್ವವನ್ನು ಅಸಡ್ಡೆ ಮಾಡಿದರೆ, ಅದು ಸಹ ಪಾಪವಾಗುತ್ತದೆ. ನಮ್ಮ ಭಕ್ತಿಯುಳ್ಳ ಸ್ತ್ರೀಯರಿಗೆ ಸನ್ಮಾನವನ್ನು ನೀಡಿ, ಅವರಂತೆಯೇ ಇತರರನ್ನು ಭಕ್ತಿಗೆ ನಡಿಸುವಂತೆ, ಸ್ತ್ರೀಯರನ್ನು ಪ್ರೋತ್ಸಾಹಿಸೋಣ!

---

ಟಿಪ್ಪಣಿ

[1]Some English terms come from the root word *hupo*, meaning "under," such as *hypodermic* ("under the skin") and *hypothermia* (a condition in which one's body is dangerously below, or under, the normal temperature).

# ಹೊಸ ಒಡಂಬಡಿಕೆಯ ಸ್ತ್ರೀಯರು

**ಪ್ರಖ್ಯಾತಿಗೊಂಡಿದ್ದ ಸ್ತ್ರೀಯರು**

**ಅನ್ನ**, ಯೇಸುವಿನ ಪ್ರತಿಷ್ಟೆಯಲ್ಲಿ ದೇವಾಲಯದಲ್ಲಿ ಇದ್ದವಳು (ಲೂಕ 2:36, 37).

**ಮರಿಯಳು**, ಯೇಸುವಿನ ತಾಯಿ (ಲೂಕ 1:27-30).

**ಮಗ್ದಲದ ಮರಿಯಳು**, ಯೇಸುವನ್ನು ಉಪಚರಿಸಿದವಳು ಮತ್ತು ಆತನ ಸಮಾದಿಯ ಬಳಿಯಲ್ಲಿ ಇದ್ದವಳು (ಮತ್ತಾಯ 27:55-61).

**ಮರಿಯಳು**, ಕ್ಲೋಪಾನ ಹೆಂಡತಿ, ಯೇಸುವಿನ ಕ್ರೂಜೆಯ ಬಳಿ ಇದ್ದವಳು (ಯೋಹಾನ 19:25).

**ಮರಿಯಳು**, ಮಾರ್ಕನೆನೆಸಿಕೊಂಡ ಯೋಹಾನನ ತಾಯಿ (ಅಪೊಸ್ತಲರಕೃತ್ಯ ಗಳು 12:12).

**ದೊರ್ಕಳು** ವಿಧವೆಯರ ಸ್ನೇಹಿತೆ (ಅಪೊಸ್ತರಕೃತ್ಯಗಳು 9:36-39).

**ಸಲೋಮೆ**, ಯಾಕೋಬ ಮತ್ತು ಯೋಹಾನರ ತಾಯಿ (ಮತ್ತಾಯ 27:55, 56; ಮಾರ್ಕ 16:1).

**ಪ್ರಿಸ್ಕಿಲ್ಲಳು**, ತನ್ನ ಗಂಡನಾದ ಅಕ್ವಿಲನ ಜೊತೆಯಲ್ಲಿ ಅಪೊಲ್ಲೋಸನಿಗೆ ಬೋಧಿಸಿದಳು (ಅಪೊಸ್ತಲರಕೃತ್ಯಗಳು 18:24-26).

**ಫೊಯಿಬೆ**, ರೋಮಾಪುರ ಸಭೆಗೆ ಪತ್ರವನ್ನು ರವಾನಿಸಿದವಳು (ರೋಮಾಪುರ 16:1).

**ಲುದ್ಯಳು**, ಫಿಲಿಪ್ಪಿಯಲ್ಲಿದ್ದ ಭಕ್ತೆಯಾದ ವ್ಯಾಪಾರಿ (ಅಪೊಸ್ತಲರಕೃತ್ಯಗಳು 16:14).

**ಪ್ರಖ್ಯಾತಿ ಇಲ್ಲದ ಸ್ತ್ರೀಯರು**

**ಹೆರೋದ್ಯಳು**, ಅಂತಿಪ ಮತ್ತು ಫಿಲಿಪ್ಪನ ಹೆಂಡತಿ (ಮಾರ್ಕ 6:17-25).

**ಸಲೋಮೆ**, ಸ್ನಾನಿಕವಾದ ಯೋಹಾನನ ತಲೆಯನ್ನು ಕೇಳಿದ ಹೆರೋದ್ಯಳ ಮಗಳು (ಮಾರ್ಕ 6:22).

**ಸಪ್ಫೆರಳು**, ಅನನೀಯನ ಹೆಂಡತಿ, ಗಂಡನೊಂದಿಗೆ ಒಳಸಂಚು ಮಾಡಿ ದೇವರಿಗೆ ಸುಳ್ಳು ಹೇಳಿದವಳು (ಅಪೊಸ್ತಲರಕೃತ್ಯಗಳು 5:1).

**ಯುವೊದ್ಯಳು ಮತ್ತು ಸಂತುಕೆ**, "ಒಂದೇ ಮನಸ್ಸಿನಿಂದ" ಇರಬೇಕೆಂಬ, ಬೋಧನೆಗೆ ಒಳಗಾದವರು (ಫಿಲಿಪ್ಪಿ 4:2).

**ಯೆಜೆಬೇಲ್‌ಳು,** ಥಯತೀರದವಳು ಯೇಸುವಿನ ದಾಸರನ್ನು ದುರ್ಮಾಗಕ್ಕೆ ನಡಿಸಿದವಳು (ಪ್ರಕಟಣೆ 2:20).

ಎಡ್ ಸ್ಯಾಂಡರ್ಸ್

# ಒಬ್ಬ ಸ್ತ್ರೀ ಹೇಗೆ ಕ್ರೈಸ್ತಳಾಗಬಹುದು?

## ಓವೆನ್ ಡಿ. ಓಲ್‌ಬ್ರಿಚ್ಟ್

ಸ್ನಾನಿಕನಾದ ಯೋಹಾನನು, ಯೇಸುವನ್ನು ದೇವರ ಮಗನೆಂದು ಗ್ರಹಿಸಿದ್ದವರಲ್ಲಿ ಮೊದಲನೆಯವನಾಗಿದ್ದರೂ (ಯೋಹಾನ 1:29-34), ಬಾವಿಯ ಬಳಿಯಲ್ಲಿದ್ದ ಸ್ತ್ರೀಗೆ ಯೇಸು, ತಾನು ಕ್ರಿಸ್ತನು ಎಂದು ಪ್ರಕಟಿಸಿಕೊಂಡನು (ಯೋಹಾನ 4:25, 26). ಆಕೆಯು ಸಮಾರ್ಯದವಳಾಗಿದ್ದರಿಂದ, ಅವಳ ಹೆಸರು ಇಲ್ಲಿ ನಮೂದಾಗಿರುವದಿಲ್ಲ. ಅವಳೊಂದಿಗೆ ಒಬ್ಬ ಯೆಹೂದಿಯು ಸಂವಾದ ಮಾಡಬಾರದಿತ್ತು, ಆದರೂ ಯೇಸು ಬೋಧಿಸಿದ ಒಂದು ಮಹತ್ತರವಾದ ಬೈಬಲ್ ಬೋಧನೆಯನ್ನು ಕೇಳಿಸಿಕೊಳ್ಳುವ ಒಂದು ಅವಕಾಶವನ್ನು ಆಕೆಯು ಪಡಕೊಂಡಳು (ಯೋಹಾನ 4:21-24). ಅವಳು "ಈ ಬೋಧನೆಗೆ ಒಳಪಟ್ಟವಳಾಗಿ, ಇವನು ಕ್ರಿಸ್ತನಲ್ಲವೋ?" ಎಂಬುದಾಗಿ ಪಟ್ಟಣದ ಜನರಿಗೆ ಕೇಳಿದಳು (ಯೋಹಾನ 4:29).

ದೀಕ್ಷಾಸ್ನಾನ ಮಾಡಿಸಿಕೊಂಡ ಮಹಿಳೆಯರಲ್ಲಿ, ಲುದ್ಯಳು ಪ್ರಥಮವಾಗಿ ಮತ್ತು ಮೊದಲನೆಯದಾಗಿ ಕಾಣಿಸಿಕೊಂಡಳು (ಅಪೊಸ್ತಲರಕೃತ್ಯಗಳು 16:14, 15). "ಲುದ್ಯಳು" ಎಂಬುದು ಆಕೆಯ ಸ್ಥಾನವಾಗಿತ್ತೇ ವಿನಃ ಅದು ಆಕೆಯ ಹೆಸರಾಗಿರುವದಿಲ್ಲ ಎಂದು ಕೆಲವರು ತಿಳಿಯುತ್ತಾರೆ. ಯಾಕೆಂದರೆ, ಅವಳು ಥಯತೀರ ಭಾಗದ ಲುದ್ಯದವಳಾಗಿದ್ದಳು. ಆದರೆ ವಾಕ್ಯವು "ಆಕೆ ಲುದ್ಯಳು" ಎಂದು ವ್ಯಾಖ್ಯಾನಿಸುತ್ತದೆ. ಆಕೆಯ ಹೆಸರನ್ನು ನಮೂದಿಸುವದು ಯೋಗ್ಯವಾದದ್ದು ಎಂದು ಲೂಕನು ತಿಳಿದಿದ್ದನು. ದೀಕ್ಷಾಸ್ನಾನ ಮಾಡಿಸಿಕೊಂಡ ಇನ್ನೂ ಮೂವರ ಹೆಸರುಗಳನ್ನು ಲೂಕನು ನಮೂದಿಸಿದ್ದಾನೆ. ಯೇಸು (ಲೂಕ 3:21), ಸಿಮೋನ (ಅಪೊಸ್ತಲರಕೃತ್ಯಗಳು 8:13), ಮತ್ತು ಸೌಲ (ಅಪೊಸ್ತಲರಕೃತ್ಯಗಳು 9:17, 18). ಅವನು ಐಥಿಯೋಪ್ಯದವನೊಬ್ಬನು ಎಂದು (ಅಪೊಸ್ತಲರಕೃತ್ಯಗಳು 8:27-39) ಮತ್ತು ಸೆರೆಯ ಯಜಮಾನನು (ಅಪೊಸ್ತಲಕೃತ್ಯಗಳು 16:25-34) ಇವರೂ ಸಹ ದಿಕ್ಷಾಸ್ನಾನ ಮಾಡಿಸಿಕೊಂಡವರು. ಆದರೆ ಅವರ ಹೆಸರನ್ನೂ ನಮೂದಿಸಲಿಲ್ಲ. ಕೊರ್ನೇಲ್ಯನ ಮನೆಯವರು ಸಹ ದೀಕ್ಷಾಸ್ನಾನದ ಅಪ್ಪಣೆಗೆ ಒಳಗಾದವರು ಎಂದು ತಿಳಿಸಿದ್ದಾನೆ (ಅಪೊಸ್ತಲರಕೃತ್ಯ ಗಳು 10:48).

ಲುದ್ಯಳು ಬಹುಶಃ ಪ್ರಖ್ಯಾತಿಯಾಗಿದ್ದ ಸ್ತ್ರೀ ಇರಬಹುದು ಆಕೆಯು ವ್ಯಾಪಾರಿಯಾಗಿದ್ದರಿಂದ, ಐಶ್ಚರ್ಯವಂತಳೂ ಆಗಿದ್ದಳು, ಅವಳು ಮಾಡುತ್ತಿದ್ದ ದೂಮ್ರವರ್ಣದ ವಸ್ತ್ರಗಳನ್ನು, ಉನ್ನತಾಧಿಕಾರಿಗಳು ಧರಿಸುತ್ತಿದ್ದರು, ಮತ್ತು ಅದು ಅವರ ಘನತೆಯ ಸಂಕೇತವಾಗಿತ್ತು. ಲೂಕ ಪೌಲ ಸೀಲ, ತಿಮೊಥೆಯರನ್ನು ಸತ್ಕರಿಸಲು, ಉತ್ತಮ ವಾದ ಮನೆಯನ್ನು ಸಹ ಹೊಂದಿದ್ದಳು, ಮತ್ತು ಪೌಲನೊಂದಿಗೆ ಪ್ರಯಾಣ ಮಾಡುತ್ತಿದ್ದ ಇತರರನ್ನು ಸತ್ಕರಿಸಿದ್ದಳು. ಆಕೆಯು ಕುಟುಂಬವನ್ನು ಹೊಂದಿದ್ದರಿಂದ, ಅಲ್ಲಿ ಆಳುಗಳು ಸಹ ಇದ್ದರು.

ಪೌಲನು ಆಸ್ಯಸೀಮೆಯ, ತ್ರೋವದಿಂದ ಫಿಲಿಪ್ಪಿಗೆ ಪ್ರಯಾಣ ಮಾಡಿದ್ದನು. ಅಲ್ಲಿ ಲುದ್ಯಳನ್ನು ಮತ್ತು ದೇವರ ಆರಾಧನೆ ಮಾಡುತ್ತಿದ ಇತರರು ಪ್ರಾರ್ಥನೆಗಾಗಿ ಕೂಡಿ ಬರುತ್ತಿದ್ದರು. ಅವಳು ಪೌಲನ ಸಂದೇಶವನ್ನು ಆಸಕ್ತಿಯಿಂದ ಕೇಳುತ್ತಿದ್ದಳು, ಆಗ ದೇವರು ಆಕೆಯ ಹೃದಯವನ್ನು ತೆರೆದನು, ದೇವರು ನೇರವಾದ ಬಲದಿಂದ ಅವಳ ಹೃದಯವನ್ನು ತೆರೆದನು ಎಂದು ಕೆಲವರು ಭಾವಿಸುತ್ತಾರೆ. ಆದರೆ ಇತರರಂತೆಯೇ ಆಕೆಯ ಹೃದಯವೂ ಸಹ ತೆರೆಯಿತು ಎಂದು ಇನ್ನೂ ಕೆಲವರು ವಿವರಿಸುತ್ತಾರೆ. ಪೌಲನು ಮಾಡಿದ ಯೇಸುವಿನ ಕುರಿತಾದ ಪ್ರಸಂಗದ ಮೂಲಕ

ಅವರೆಲ್ಲರ ಹೃದಯ ತೆರೆಯಲ್ಪಟ್ಟಿತು. ಯೇಸು ತನ್ನ ಸಲಹೆಯ ಮೂಲಕ ಅಪೊಸ್ತಲರ ಮನಸ್ಸನ್ನು ತೆರೆದಿದ್ದನು (ಲೂಕ 24:45). ಯೆಹೂದ್ಯರ ಹೃದಯವು, ಪಂಚಾಶತ್ತಮ ದಿನದಲ್ಲಿ ಪ್ರೇತ್ರನು ಮಾಡಿದ, ಕ್ರಿಸ್ತನ ಕುರಿತಾದ ಪ್ರಸಂಗದಿಂದ ಸ್ಪರ್ಶಿತವಾಯಿತು. ನಂತರ ನಾವೇನು ಮಾಡಬೇಕು ಎಂದು ಪೇತ್ರನನ್ನು ಕೇಳಲು (ಅಪೊಸ್ತಲರಕೃತ್ಯ 2:37). ಪೇತ್ರನು ಪ್ರತಿಕ್ರಿಯಿಸಿ "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪರಿಶುದ್ಧಾತ್ಮದಾನವನ್ನು ಹೊಂದುವಿರಿ" ಎಂದು ಹೇಳಿದನು (ಅಪೊಸ್ತಲರಕೃತ್ಯಗಳು 2:38).

ಪೇತ್ರನು ಅವರಿಗೆ ಇನ್ನೂ ತಿಳಿಸಿದ್ದೇನೆಂದರೆ ಆ ವಾಗ್ದಾನವು "ದೂರವಾಗಿರುವವರೆಲ್ಲರಿಗೂ" (ಅಪೊಸ್ತಲರಕೃತ್ಯಗಳು 2:39). ಪೌಲನು ಹೇಳಿದ್ದೇನೆಂದರೆ "ದೂರವಾಗಿದ್ದ" ಅಂದರೆ ಅನ್ಯರ ಕುರಿತಾಗಿ ಹೇಳುತ್ತಿದ್ದಾನೆ (ಎಫೆಸ 2:13). "ಲುದ್ಯಳು" ಸಹ ದೂರವಾಗಿದ್ದವಳು ಸುವಾರ್ತೆಯ ಸಂದೇಶವನ್ನು ಕೇಳಿದವರೆಲ್ಲರೂ ಸಹ, ಹೃದಯವನ್ನು ತೆರೆಯುವುದರ ಮೂಲಕ ಯೇಸುವಿನ ಪಾಪಕ್ಷಮೆಯನ್ನೂ ಪಡೆಯಬಹುದು. ಸುವಾರ್ತೆಯನ್ನು ನಂಬುವದರಿಂದ, ಮಾನಸಾಂತರ ಪಡುವದರಿಂದ ಮತ್ತು ದೀಕ್ಷಾಸ್ನಾನ ಹೊಂದುವದರಿಂದ, ಪಾಪದ ಪರಿಹಾರವನ್ನು ಪಡೆಯಬಹುದು.

ಅವಳು ಪೌಲನ ಸಂದೇಶನ್ನು ಕೇಳಿದ ನಂತರ ಯಥಾರ್ಥವಾದ ಪ್ರತಿಕ್ರಿಯೆಯನ್ನು ನೀಡಿದಳು. ಅವಳು ಯೇಸುವಿನ ರಕ್ತವು ಆಕೆಯ ಪಾಪವನ್ನು ಕ್ಷಮಿಸುವುದು ಎಂದು ನಂಬಿಕೆಯನ್ನು ಇಟ್ಟದ್ದರಿಂದ, ದೀಕ್ಷಾಸ್ನಾನ ಮಾಡಿಸಿಕೊಂಡಳು. ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ, ಅದರಲ್ಲಿ ಆತನ ಕೂಡ ಎದ್ದು ಬಂದಿರುವ ಅವರ ಪಾಪಗಳು ಕ್ಷಮಿಸಲ್ಪಡುತ್ತವೆ (ಕೊಲಸ್ಸೆ 2:12, 13). ಎಂಬ ಸಂದೇಶವನ್ನು ಯಾವ ಕ್ರೈಸ್ತರಿಗೆ ಸಾರಿದನೋ, ಅದೇ ಸಂದೇಶವನ್ನೂ ಲುದ್ಯಳಿಗೂ ಸಾರಿದನು. ಈ ರೀತಿಯಾಗಿ ಅವಳು ಯೇಸುವನ್ನು ಸಂಧಿಸಿ, ಆತನನ್ನು ಧರಿಸಿಕೊಂಡಳು (ಗಲಾತ್ಯ 3:27), ಅವಳು ಕ್ರಿಸ್ತನಲ್ಲಿ ನೂತನವಾದ ಜೀವಿತವನ್ನು ಆರಂಭಿಸಿದಳು (ರೋಮಾಪುರ 6:3, 4; 2 ಕೊರಿಂಥ 5:17).

ಚಿಕ್ಕ ಮಕ್ಕಳಿಗೆ ಮಾಡುವಂತ ದೀಕ್ಷಾಸ್ನಾನದಂತೆ, ಲುದ್ಯಳ ಮನೆಯವರಿಗೂ ದೀಕ್ಷಾಸ್ನಾನ ಮಾಡಿಸಲಾಯಿತು ಎಂದು ಕೆಲವರ ಅಭಿಪ್ರಾಯ. ಈ ಹೇಳಿಕೆಯಲ್ಲಿ ಎರಡು ವಿಧವಾದ ಹೇಳಿಕೆಗಳು ಉದ್ಭವಿಸುತ್ತವೆ. ಮೊದಲನೆಯದಾಗಿ ಇಲ್ಲಿ ಚಿಕ್ಕ ಮಕ್ಕಳ ಕುರಿತಾಗಿ ಹೇಳಲ್ಪಟ್ಟಿರುವದಿಲ್ಲ (ಮಕ್ಕಳಿಲ್ಲದ ಮನೆಗಳು ಮಕ್ಕಳಿರುವ ಮನೆಗಿಂತಲೂ ಚಿಕ್ಕದಾಗಿರುತ್ತದೆ). ಎರಡನೆಯದಾಗಿ ಅದು ಅವಳು ಮದುವೆಯಾಗಿರಲಿಲ್ಲ ಎಂಬ ಸೂಚನೆಯೂ ಕೂಡ ಆಗಿರುತ್ತದೆ. ಅವಳು ನಮ್ಮ ಮನೆ ಅನ್ನುವದಕ್ಕಿಂತಲೂ "ನನ್ನ ಮನೆ" ಎಂಬುದಾಗಿ ಹೇಳಿದಳು. ಒಂದು ವೇಳೆ ಅವಳಿಗೆ ಗಂಡನಿರಲಿಲ್ಲ.

ಒಂದು ವೇಳೆ, ಲುದ್ಯಳು ಐರೋಪ್ಯದೇಶದಲ್ಲಿಯೇ ಮೊದಲನೆಯ ಕ್ರೈಸ್ತಳಾಗಿರ ಬಹುದು. ಅವಳು ಲಕ್ಷಗಟ್ಟಲೆ ಜನರು ಸುವಾರ್ತೆಯನ್ನು ಸ್ವೀಕರಿಸುವಂತೆ, ಬಾಗಿಲನ್ನು ತೆರೆದಳು. ಈ ಮಹತ್ವದ ಮಹಿಳೆಯ ಮಾದರಿಯನ್ನು ನಾವು ಅನುಸರಿಸುವವರಾದರೆ ನಾವು ಉತ್ತಮ ಕಾರ್ಯಗಳನ್ನೂ ಮಾಡುವದಕ್ಕೆ ಸಾಧ್ಯವಾಗುತ್ತದೆ. ಆಕೆಯು ಯೇಸುವನ್ನು ನಂಬುವುದರ ಮೂಲಕ ಆಕೆಯ ರಕ್ಷಕನ ಮರಣ ಪುನರುತ್ಥಾನದಲ್ಲಿ ಪಾಲುತೆಗೆದು ಕೊಂಡು, ಆತನನ್ನೇ ಹಿಂಬಾಲಿಸಿದಳು. ಈ ಕಾರ್ಯದ ನಿಮಿತ್ತ ತನ್ನ ಹಳೆಯ ಜೀವಿತಕ್ಕೆ ಸತ್ತು, ಯೇಸುವಿನಲ್ಲಿ ನೂತನ ಜೀವಿತವನ್ನು ಪ್ರಾರಂಭಿಸಿದಳು (ರೋಮಾಪುರ 6:4).